ಮಗ ಬರಹ ಕಲಿತ

ಕನರಾಡಿ ವಾದಿರಾಜ ಭಟ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

[illegible]

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಮಗ ಬರಹ ಕಲಿತ - ಕನರಾಡಿ ವಾದಿರಾಜ ಭಟ್ಟ ಅವರಿಂದ
ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಶಾರಾದ ಕಾಲೇಜು, ಬಸ್ರೂರು, ಕುಂದಾಪುರ ತಾ - 576211
ಪ್ರಸರಣ - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು.

ಮುದ್ರಣ	:	2007
ಬೆಲೆ	:	ರೂ. 25
ಪುಟಗಳು	:	24
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಅಕಾಡೆಮಿ
ಮುದ್ರಣ	:	ಪವನ್ ಗ್ರಾಫಿಕ್ಸ್ ಅಳಕೆ, ಮಂಗಳೂರು - 575 003. Ph : 92428 85743.

ಮಕ್ಕಳಿಗಾಗಿ ಕತೆಗಳು - ೪

ಮಕ್ಕಳಿಗಾಗಿ ಕತೆ

ಮಗ ಬರಹ ಕಲಿತ

ಕನರಾಡಿ ವಾದಿರಾಜ ಭಟ್ಟ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575003.
ದೂರವಾಣಿ / ಫ್ಯಾಕ್ಸ್ : 0824- 2459389
Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ "ಅಜ್ಜಿ ಕರ್ತೆಗಳು" ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದು ಅದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ತುಳು ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, ಹಾಗೂ 1998ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಗೊಳಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ತುಳುವಿನ 'ಮಗೆ ಬರವು ಕಲ್ತೆ' ಕತೆ ಕನ್ನಡದಲ್ಲಿ **"ಮಗ ಬರಹ ಕಲಿತ"** ಎಂಬ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಗೊಂಡು ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಅಜ್ಜಿ ಕತೆಗಳಾದರೂ, ಮಕ್ಕಳಿಗೆ ನೀತಿಯ ಪಾಠದ ಅರಿವು ಮೂಡಿಸುತ್ತದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಶ್ರೀ ಕನರಾಡಿ ವಾದಿರಾಜ ಭಟ್ಟರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಪವನ್ ಗ್ರಾಫಿಕ್ಸ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು.

ಮಗ ಬರಹ ಕಲಿತ

ಒಂದು ಊರಿನಲ್ಲಿ ಒಬ್ಬಳು ಅಜ್ಜಿ. ಅಜ್ಜಿಯ ಜೊತೆಯಲ್ಲಿ ಒಬ್ಬ ಸಾಕಿದ ಮಗ. ಅವನ ಹೆಸರು ಮುದ್ದು. ಒಂದು ದಿನ ಮುದ್ದು ಅಜ್ಜಿಯೊಡನೆ ಹೇಳಿದ "ಅಜ್ಜೀ ಅಜ್ಜಿ, ನಾನು ಶಾಲೆಗೆ ಹೋಗುತ್ತೇನೆ. ನನಗೆ ಬರಹ ಕಲಿಯಬೇಕು. ನನಗೆ ನಾಲ್ಕು ರೊಟ್ಟಿ ಮಾಡಿಕೊಡು".

ಅಜ್ಜಿಗೆ ಮಗನ ಮೇಲೆ ತುಂಬ ಪ್ರೀತಿ. ಮುದ್ದು ಶಾಲೆಗೆ ಹೋದರೆ ಮನೆ ಕಾಲಿ. ಮನೆಯಲ್ಲಿ ಅಜ್ಜಿ ಒಬ್ಬಳೇ ಆಗುತ್ತಾಳೆ. ಆದುದರಿಂದ ಅಜ್ಜಿ "ಶಾಲೆಗೆ ಹೋಗುವುದು ಬೇಡ ಮಗ" ಎಂದಳು.

ಮಗ ಕೇಳಲಿಲ್ಲ. ಹಟ ಮಾಡಿದ. ಮತ್ತೆ ಹೇಳಿದ "ನಾನು ಶಾಲೆಗೆ ಹೋಗಲೇ ಬೇಕು. ನನಗೆ ರೊಟ್ಟಿ ಮಾಡಿಕೊಡು".

ಕಡೆಗೆ ಅಜ್ಜಿ ನಾಲ್ಕು ಮನೆಗೆ ಹೋಗಿ ಬೇಡಿದಳು. ನಾಲ್ಕು ರೊಟ್ಟಿ ಮಾಡಿ ಕೊಟ್ಟಳು. ನಾಲ್ಕು ರೊಟ್ಟಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡ ಮುದ್ದು, ನೇರ ಹೋದ.

ಹೋಗ್ತಾ, ಹೋಗ್ತಾ... ಹೋಗುತ್ತಿರುವಾಗ ಒಂದು ಹೆಗ್ಗುಳ ಸಿಕ್ಕಿತು. ಆ ಹೆಗ್ಗುಳನಿಗೆ

ಮುದ್ದು ಕೇಳಿದ.

"ಹೆಗ್ಗುಳಣ್ಣ, ಹೆಗ್ಗುಳಣ್ಣ, ನನಗೆ ಬರಹ ಕಲಿಯಬೇಕು. ನೀನು ನನಗೆ ಕಲಿಸುತ್ತಿಯಾ?"

ಅದಕ್ಕೆ ಹೆಗ್ಗುಳ ಹೇಳಿತು "ನಾನು ಬರಹ ಕಲಿಸಿದರೆ ನನಗೇನು ಕೊಡುವೆ?"

ನನಗೆ ಬರಹ ಕಲಿಸಿದರೆ ಎರಡು ರೊಟ್ಟಿ ನಿನಗೆ. ಆಗ ಹೆಗ್ಗುಳ ಕಲಿಸಿತು. "ಹೆಗ್ಗುಳಣ್ಣ ಮೋಳ ತೋಡುತ್ತಿದ್ದಾನೆ" ಮುದ್ದು ಹಾಗೆಯೇ ಹೇಳುತ್ತಾ ಮನೆಗೆ ಬಂದ.

ಮರುದಿನ ಮುದ್ದು ಮತ್ತೆ ಅಜ್ಜಿಯೊಡನೆ ಕೇಳಿದ "ಅಜ್ಜೀ ಅಜ್ಜಿ. ನನಗೆ ಬರಹ ಕಲಿಯಬೇಕು. ನಾನು ಶಾಲೆಗೆ ಹೋಗುತ್ತೇನೆ. ನನಗೆ ನಾಲ್ಕು ರೊಟ್ಟಿ ಮಾಡಿಕೊಡು". ಆಗ ಅಜ್ಜಿ ನಾಲ್ಕು ಮನೆಗೆ ಹೋಗಿ ಬೇಡಿದಳು. ನಾಲ್ಕು ರೊಟ್ಟಿ ಮಾಡಿಕೊಟ್ಟಳು. ನಾಲ್ಕು ರೊಟ್ಟಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡ, ಮುದ್ದು, ನೇರ ಹೋದ.

ಹೋಗ್ತಾ, ಹೋಗ್ತಾ... ಹೋಗುತ್ತಿರುವಾಗ ದಾರಿಯಲ್ಲಿ ಒಂದು ಎತ್ತು ಮಲಗಿಕೊಂಡಿತ್ತು. ಅದರೊಡನೆ ಮುದ್ದು ಕೇಳಿದ.

"ಬಸವಣ್ಣ , ಬಸವಣ್ಣ ನನಗೆ ಬರಹ ಕಲಿಯಬೇಕು ದಾರಿ ಬಿಡು". ಆಗ ಎತ್ತು ಹೇಳಿತು.

"ನಾನು ಬರಹ ಕಲಿಸುತ್ತೇನೆ. ನನಗೇನು ಕೊಡುವೆ" ಮುದ್ದು ಹೇಳಿದ "ನನ್ನಲ್ಲಿ ನಾಲ್ಕು ರೊಟ್ಟಿಗಳಿವೆ. ಅದರಲ್ಲಿ ಎರಡು ರೊಟ್ಟಿ ನಿನಗೆ ಕೊಡುವೆ!" ಎಂದು ಎರಡು ರೊಟ್ಟಿ ಎತ್ತಿಗೆ ಕೊಟ್ಟ. ಆಗ ಎತ್ತು ಹೇಳಿಕೊಟ್ಟಿತು. "ಬಸವಣ್ಣ ಮಲಗಿದ್ದಾನೆ".

ಮುದ್ದು ಹಾಗೆಯೇ ಹೇಳುತ್ತಾ ಮನೆಗೆ ಬಂದ.

ಮರುದಿನ ಮುದ್ದು ಮತ್ತೆ ಪುನಃ ಅಜ್ಜಿಯೊಡನೆ ಕೇಳಿದ "ಅಜ್ಜೀ ಅಜ್ಜಿ. ನನಗೆ ಬರಹ ಕಲಿಯಬೇಕು. ನಾನು ಶಾಲೆಗೆ ಹೋಗುತ್ತೇನೆ. ನನಗೆ ನಾಲ್ಕು ರೊಟ್ಟಿ ಮಾಡಿಕೊಡು".

ಅಜ್ಜಿ ನಾಲ್ಕು ಮನೆಗೆ ಹೋಗಿ ಬೇಡಿದಳು. ನಾಲ್ಕು ರೊಟ್ಟಿ ಮಾಡಿಕೊಟ್ಟಳು. ನಾಲ್ಕು ರೊಟ್ಟಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡ, ಮುದ್ದು, ನೇರ ಹೋದ.

ಹೋಗ್ತಾ, ಹೋಗ್ತಾ... ಹೋಗುತ್ತಿರುವಾಗ ಒಂದು ಮರದಲ್ಲಿ ಮಂಗಣ್ಣ ಕುಳಿತಿದೆ.

ಆಗ ಮುದ್ದು ಹೇಳಿದ "ಮಂಗಣ್ಣ, ಮಂಗಣ್ಣ, ನನಗೆ ಬರಹ ಕಲಿಯಬೇಕು. ನೀನು ಕಲಿಸುವೆಯಾ"?.

ಅದಕ್ಕೆ ಮಂಗಣ್ಣ ಕೇಳಿತು. "ನಾನು ಬರಹ ಕಲಿಸಿದರೆ ನನಗೇನು ಕೊಡುವೆ"?

"ನನ್ನಲ್ಲಿ ನಾಲ್ಕು ರೊಟ್ಟಿಗಳಿವೆ. ಅದರಲ್ಲಿ ಎರಡು ರೊಟ್ಟಿ ನಿನಗೆ ಕೊಡುವೆ" ಎಂದು ಮುದ್ದು ಹೇಳಿದ, ಎರಡು ರೊಟ್ಟಿ ಕೊಟ್ಟ.

ಆಗ ಎರಡು ರೊಟ್ಟಿ ಮಂಗಣ್ಣ ತೆಗೆದುಕೊಂಡು "ಮಂಗಣ್ಣ ಮರದಲ್ಲಿ ಕುಳಿತಿದ್ದಾನೆ" ಎಂದು ಹೇಳಿಕೊಟ್ಟಿತು. ಮುದ್ದು ಹಾಗೆಯೇ ಹೇಳುತ್ತಾ ಮನೆಗೆ ಬಂದ.



ಮರುದಿನ ಮುದ್ದು ಮತ್ತೆ ಪುನಃ ಅಜ್ಜಿಯೊಡನೆ ಕೇಳಿದ "ಅಜ್ಜೀ ಅಜ್ಜಿ. ನನಗೆ ಬರಹ ಕಲಿಯಬೇಕು. ನಾನು ಶಾಲೆಗೆ ಹೋಗುತ್ತೇನೆ. ನನಗೆ ನಾಲ್ಕು ರೊಟ್ಟಿ ಮಾಡಿಕೊಡು".

ಅಜ್ಜಿ ನಾಲ್ಕು ಮನೆಗೆ ಹೋಗಿ ಬೇಡಿದಳು. ನಾಲ್ಕು ರೊಟ್ಟಿ ಮಾಡಿಕೊಟ್ಟಳು. ನಾಲ್ಕು ರೊಟ್ಟಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡ, ಮುದ್ದು, ನೇರ ಹೋದ.

ಹೋಗ್ತಾ, ಹೋಗ್ತಾ... ಹೋಗುತ್ತಿರುವಾಗ, ಒಂದು ನರಿ ಓಡುತ್ತಿತ್ತು. ಆಗ ಮುದ್ದು ಹೇಳಿದ "ನರಿಯಣ್ಣಾ, ನರಿಯಣ್ಣಾ ನನಗೆ ಬರಹ ಕಲಿಸುವೆಯಾ"?

"ನಾನು ಬರಹ ಕಲಿಸಿದರೆ ನನಗೇನು ಕೊಡುವೆ"? ಎಂದು ನರಿ ಕೇಳಿತು.

"ನನ್ನಲ್ಲಿ ನಾಲ್ಕು ರೊಟ್ಟಿಗಳಿವೆ. ಅದರಲ್ಲಿ ಎರಡು ರೊಟ್ಟಿ ನಿನಗೆ ಕೊಡುವೆ" ಎಂದು ಮುದ್ದು ಹೇಳಿದ, ಎರಡು ರೊಟ್ಟಿ ಕೊಟ್ಟ.

ನರಿ ಎರಡು ರೊಟ್ಟಿ ತೆಗೆದುಕೊಂಡಿತು, "ನರಿಯಣ್ಣಾ ಓಡುತ್ತಿದ್ದಾನೆ, ನರಿಯಣ್ಣಾ ಓಡುತ್ತಿದ್ದಾನೆ" ಎಂದು ಹೇಳಿಕೊಟ್ಟಿತು.

ಮುದ್ದು ಹಾಗೆಯೇ ಹೇಳುತ್ತಾ ಮನೆಗೆ ಬಂದ.

ಆ ದಿನ ರಾತ್ರಿ ಅಜ್ಜಿ ಕೇಳಿದಳು. "ಹೌದಾ ಮಗ ಮುದ್ದೋ ನಾಲ್ಕು ದಿನ ಶಾಲೆಗೆ ಹೋದೆ. ಶಾಲೆಯಲ್ಲಿ ಏನೆಲ್ಲ ಕಲಿಸಿಕೊಟ್ಟರು"?

ಹೀಗೆ ಅಜ್ಜಿ ಕೇಳುವಾಗ, ಅದೇ ಸಮಯಕ್ಕೆ ಒಬ್ಬ ಕಳ್ಳ ಮನೆಯ ಹಿಂಬದಿ ಕನ್ನ ಗೋಡೆಯಲ್ಲಿ ಕೊರೆಯುತ್ತಿದ್ದ. ಆಗ ಮುದ್ದು ತಾನು ಕಲಿತುದನ್ನು ಗಟ್ಟಿಯಾಗಿ ಹೇಳತೊಡಗಿದ.

"ಹೆಗ್ಗುಳಣ್ಣಾ ಮೋಳ ತೋಡುತ್ತಿದ್ದಾನೆ.! ಹೆಗ್ಗುಳಣ್ಣಾ ಹೆಗ್ಗುಳಣ್ಣಾ ಮೋಳ ತೋಡುತ್ತಿದ್ದಾನೆ"!

ಇದನ್ನು ಕೇಳಿದ ಕೂಡಲೇ ಕಳ್ಳನಿಗೆ ಹೆದರಿಕೆಯಾಯಿತು. ಹೋಹೋ ಯಾರೋ ನನಗೇ ಹೇಳುತ್ತಿದ್ದಾರೆ ಎಂದುಕೊಂಡು ಕನ್ನ ಕೊರೆಯುವುದನ್ನು ನಿಲ್ಲಿಸಿದ. ಅಲ್ಲೇ ಮಲಗಿದ.

ಆಗ ಮುದ್ದು ಮತ್ತೊಂದು ದಿನ ಕಲಿತದ್ದನ್ನು ಹೇಳಿದ."ಬಸವಣ್ಣಾ ಮಲಗಿದ್ದಾನೆ,! ಬಸವಣ್ಣಾ ಮಲಗಿದ್ದಾನೆ"!

ಇದನ್ನು ಕೇಳಿದ ಕೂಡಲೇ ಕಳ್ಳನಿಗೆ ಮತ್ತಷ್ಟು ಹೆದರಿಕೆಯಾಯಿತು. ಹೋಹೋ, ಯಾರೋ ನನಗೇ ಹೇಳುತ್ತಿದ್ದಾರೆ ಎಂದುಕೊಂಡ, ಮೆಲ್ಲನೆ ಎದ್ದು ಒಂದು ಮರಹತ್ತಿ ಕುಳಿತುಕೊಂಡ.

ಆಗ ಮುದ್ದು ಇನ್ನೊಂದು ಸಾಲು ಹೇಳಿದ "ಮಂಗಣ್ಣ ಮರದಲ್ಲಿ ಕುಳಿತಿದ್ದಾನೆ.! ಮಂಗಣ್ಣ ಮರದಲ್ಲಿ ಕುಳಿತಿದ್ದಾನೆ"! ಇಷ್ಟು ಕೇಳಿದ್ದೇ ತಡ, ಹೆದರಿದ. ಇನ್ನು ನಾನು ಸಿಕ್ಕಿ ಬೀಳುತ್ತೇನೆ ಎಂದುಕೊಂಡು ಮರದಿಂದ ಕೆಳಕ್ಕೆ ಹಾರಿದ. ಓಡಲು ಶುರು ಮಾಡಿದ.!

ಆಗ ಮುದ್ದು ಮತ್ತೊಂದು ಸಾಲು ತಾನು ಕಲಿತದ್ದನ್ನು ಗಟ್ಟಿಯಾಗಿ ಹೇಳಿದ "ನರಿಯಣ್ಣ ಓಡುತ್ತಿದ್ದಾನೆ.! ನರಿಯಣ್ಣ ಓಡುತ್ತಿದ್ದಾನೆ"!

ಹೀಗೆ ಹೇಳುತ್ತಿರುವಾಗ ಯಾರೋ ಓಡಿದ ಶಬ್ದವಾಯಿತು. ಮುದ್ದು ಹೊರಗೆ ನೋಡಿದ, ಕಳ್ಳ ಓಡುತ್ತಿದ್ದಾನೆ. "ಕಳ್ಳ ಕಳ್ಳ ಹಿಡಿಯಿರಿ, ಹಿಡಿಯಿರಿ!" ಎಂದು ಗಟ್ಟಿಯಾಗಿ ಬೊಬ್ಬೆ ಹಾಕಿದ. ಆಚೆ ಈಚೆಯ ಮನೆಯವರು, ನೆರೆಕರೆಯವರು ಎಲ್ಲ ಓಡಿ ಬಂದರು ಕಳ್ಳನನ್ನು ಹಿಡಿದರು. ಆಗ ಅಜ್ಜಿ ಎಲ್ಲರ ಮುಂದೆ ಹೇಳಿದಳು. ನೋಡಿದಿರಾ. ನಮ್ಮ ಮುದ್ದು ಬರಹ ಕಲಿತದ್ದರಿಂದ ಕಳ್ಳನನ್ನು ನೀವೆಲ್ಲ ಹಿಡಿದಿರಿ. ಕಳ್ಳ ಸಿಕ್ಕಿಬಿದ್ದ.

ಹೇಳಿದವರು : **ಶ್ರೀಮತಿ ಕನಕಮ್ಮ ಶೆಡ್ತಿ , ಮಣಿಪುರ**

ಕೆಲಸದ ಪೆದ್ದ

ಒಂದು ಮನೆಯಲ್ಲಿ ಅಣ್ಣ ತಮ್ಮ ಇದ್ದರು. ಅಣ್ಣ ಮನೆಯ ಯಜಮಾನ. ತಮ್ಮ ಬರೇ ಪೆದ್ದ. ಆ ಮನೆಯಲ್ಲಿ ಎಲ್ಲರೂ ದುಡಿಯುತ್ತಿದ್ದರು. ಕೆಲಸ ಮಾಡಿದರೆ ಮಾತ್ರ ಅನ್ನದ ಮಡಕೆ ಒಲೆಗೆ ಹೋಗುತ್ತಿತ್ತು. ಆದರೆ ಈ ಪೆದ್ದ ಕೆಲಸದಲ್ಲಿ ಹಿಂದೆ. ಊಟದಲ್ಲಿ ಮಾತ್ರ ಮುಂದೆ. ಇನ್ನು, ಅವನು ಕೆಲಸ ಮಾಡುವಾಗ ನೋಡಿಕೊಳ್ಳಲಿಕ್ಕೆ ಒಬ್ಬರು ಬೇಕು. ಇಲ್ಲದಿದ್ದರೆ ಒಂದಕ್ಕೆ ಒಂದುವರೆ ಮಾಡಿಡುತ್ತಾನೆ. ಇದನ್ನು ನೋಡಿ ಅಣ್ಣನಿಗೆ ಸಹಿಸಲಿಕ್ಕಾಗಲಿಲ್ಲ. ಒಂದು ದಿನ ಚೆನ್ನಾಗಿ ಹೇಳಿದ "ಮಹಾರಾಯ, ನಿನಗೆ ಅನ್ನ ಹಾಕಿ ಸಾಕಲು ನನ್ನಿಂದ ಸಾಧ್ಯವಿಲ್ಲ. ಎಲ್ಲಿಯಾದರೂ ಹೋಗಿ ಕೆಲಸ ನೋಡು. ನಿನ್ನ ಹೊಟ್ಟೆ ನೀನೇ ತುಂಬಿಸು. ಇನ್ನು ದಾರಿಯಲ್ಲಿ ಬಿದ್ದು ಸಾಯ್ ಬೇಡ. ಹಾಗೆ ಆದರೆ ಮಾತ್ರ ಮನೆಗೆ ಬಾ. ನಮಗೆ ಅದೊಂದು ಅಪವಾದ ಬೇಡ. ಹೋಗು ಮಹಾರಾಯ" ಹೀಗೆ ಹೇಳಿ ಮನೆಯಿಂದ ಹೊರಗೆ ಹಾಕಿದ.

ಅಣ್ಣ ಹೇಳಿದ ಮಾತಿಗೆ ಸರಿಯಾಗಿ ಮನೆಯಿಂದ ಹೊರಟ ತಮ್ಮ. ಹಲವು ಕಡೆಗೆ ಹೋದ. ಹಲವು ಮಂದಿಯೊಡನೆ ಕೇಳಿದ. ಎಲ್ಲಿ ಕೇಳಿದರೂ ಕೆಲಸವಿಲ್ಲ. ಯಾವ ಕೆಲಸವೂ ಇಲ್ಲವಲ್ಲ ಎಂದು ತುಂಬ ದುಃಖವಾಯಿತು.. ಮರುಗಿದ. ಮರುಗುತ್ತಾ ಹೋದ. ಅಳುತ್ತಾ ಒಂದು ಮನೆಯ ಒಳಗೆ ಹೋದ. ಮನೆಯ ಯಜಮಾನ್ತಿ ಅಳುತ್ತಿರುವ ತಮ್ಮನನ್ನು ನೋಡಿದಳು. "ಏನು ಮಗಾ" ಎಂದು ಕೇಳಿದಳು. "ನನಗೆ ಯಾವ ಕೆಲಸವೂ ಇಲ್ಲ. ಎಲ್ಲಿಯಾದರೂ ಕೆಲಸ ನೋಡು ಎಂದು ಅಣ್ಣ ಮನೆಯಿಂದ ಹೊರಗೆ ಹಾಕಿದ. ದಾರಿಯಲ್ಲಿ ಬಿದ್ದು ಸಾಯುವುದಾದ್ರೆ ಮನೆಗೆ ಹಿಂತಿರುಗಿ ಬಾ ಎಂದಿದ್ದಾನೆ" ಎಂದು ಅಳುತ್ತಾ ಹೇಳಿದ. ಯಜಮಾನ್ತಿಗೆ ಇವನನ್ನು ನೋಡಿ ಪಾಪ ಅನ್ನಿಸಿತು. ಯಜಮಾನರು ಬಂದ ಬಳಿಕ, ಅವರೊಡನೆ ಹೇಳಿದಳು. ಒತ್ತಾಯ ಮಾಡಿ ಕೆಲಸಕ್ಕೆ ಇಟ್ಟುಕೊಂಡಳು.

ಈ ಪೆದ್ದನಿಗೆ ಏನು ಕೆಲಸ ಕೊಡುವುದು ಹ್ಣ, ಗುಡ್ಡೆಯಲ್ಲಿ ಬೇಕಾದಷ್ಟು ಸೊಪ್ಪು ಇದೆ. ಹಟ್ಟಿಗೆ ಅದು ಹೆಚ್ಚಾಗಲಿಕ್ಕಿಲ್ಲ. ಆದುದರಿಂದ ಯಜಮಾನ್ತಿ ಗುಡ್ಡೆಯಿಂದ ಸೊಪ್ಪು ತಂದು ಹಾಕಲು ಹೇಳಿದಳು. ಆ ದಿನವೇ ಸೊಪ್ಪು ತಂದು ಹಾಕಲು ಸುರು ಮಾಡಿದ. ಸೊಪ್ಪಿನ ಜೊತೆಯಲ್ಲಿ ಮುಳ್ಳನ್ನೂ ಕೊಯ್ದು ತಂದ. ಹಟ್ಟಿಗೆಲ್ಲ ಹರಡಿ ಹಾಕಿದ. ಇಷ್ಟರವರೆಗೆ ಸೊಪ್ಪು ಕೊಯ್ಯುವ ಕೆಲಸ ಮಾಡಿದವನಲ್ಲ!



ಯಜಮಾನ್ತಿ ಹಾಲು ಕರೆಯಲು ತಂಬಿಗೆ ಹಿಡಿದುಕೊಂಡು ಬಂದಳು. ಹಟ್ಟಿಗೆ ದಪ್ಪವಾಗಿ ಸೊಪ್ಪು ಹರಡಿ ಹಾಕಿದ್ದನ್ನು ಕಂಡು ಕುಷಿಯಾಯಿತು. ಕುಶಿಯಲ್ಲಿ ಹಟ್ಟಿಗೆ ಇಳಿದಳು. ಒಂದು ಕಾಲು ಹಾಕಿದ್ದೇ ತಡ, ಎರಡು ಮುಳ್ಳು ಕಂತಿತು!

"ಏನಿದು? ಮುಳ್ಳನ್ನೆಲ್ಲ ಕೊಯ್ದು ತಂದು ಹಾಕಿದೆಯೇನೋ?" ಎಂದು ಯಜಮಾನ್ತಿ ಕೇಳಿದಳು.

ಪೆದ್ದ ಹೇಳಿದ "ಹೌದು, ನೀವು ಸೊಪ್ಪು ತಂದು ಹಾಕಲು ಹೇಳಿದಿರಿ. ಮುಳ್ಳಿನಲ್ಲೂ ಸೊಪ್ಪು ಇದೆಯಲ್ಲಾ?"

ಇನ್ನು ಮುಂದೆ ಮುಳ್ಳು ತಂದುಹಾಕಬಾರದು. ಎಳೆಎಳೆಯ ಸೊಪ್ಪು ನೋಡಿ ತಂದು ಹಾಕಬೇಕು. ಈಗ ಹಾಕಿದ ಸೊಪ್ಪನೆಲ್ಲ ತೆಗೆದು ಹೊರಗೆ ಹಾಕು ನೋಡೋಣ ಎಂದು ಹೇಳಿ ಹರಡಿ ಹಾಕಿದ ಸೊಪ್ಪನ್ನೆಲ್ಲ ತೆಗೆಸಿದಳು. ಅಲ್ಲಿಗೆ ಒಂದಕ್ಕೆ ಎರಡು ಕೆಲಸವಾಯಿತು.!

ಈ ಪೆದ್ದ ಮರುದಿನ ಗುಡ್ಡೆಗೆ ಹೋದ. ಎಳೆ ಎಳೆ ಸೊಪ್ಪು ಮಾತ್ರ ತಂದ. ಸ್ವಲ್ಪ ತಂದು ತೆಳುವಿನಲ್ಲಿ ಹರಡಿದ. ಸ್ವಲ್ಪ ಸೊಪ್ಪನ್ನು ಎಲ್ಲ ಕಡೆ ಹರಡಿದರೆ ಹೇಗೆ ಕಂಡೀತು! ಇದನ್ನು ನೋಡಿ ಯಜಮಾನ್ತಿ ಕೇಳಿದಳು. "ಇದೇನು ಮಾಡಿದೆಯಪ್ಪ?"

"ನೀವು ಹೇಳಿದ್ದಲ್ಲ? ಹಾಗೆಯೇ ಮಾಡಿದೆ ಎಂದ ಪೆದ್ದ"

ಇನ್ನು ಇವನನ್ನು ಈ ಕೆಲಸಕ್ಕೆ ಬಿಟ್ಟರೆ ಬರ್ಕತ್ತಿಲ್ಲ , ಉಳುವ ಕೆಲಸ ಕೊಡುವ ಎಂದು ಉಳುವ ಕೆಲಸಕ್ಕೆ ಕಳುಹಿಸಿದರು. ಒಂದೆರಡು ದಿವಸ ಚೆನ್ನಾಗಿ ಉತ್ತ. ಮಾರನೆಯ ದಿನ ಯಜಮಾನ ಹೇಳಿದ "ನೋಡು ಆ ಕೊಕ್ಕರೆ ಕುಳಿತಿದೆಯಲ್ಲ? ಆ ಗದ್ದೆ ಉಳಬೇಕು".

ಯಜಮಾನ ಹೇಳಿದ ಕೂಡಲೆ ಹೊರಟ. ಸರಿಯಾಗಿ ನೋಡಿದನೋ ಇಲ್ಲವೋ ಹೋರಿಗಳನ್ನು ಹೊಡೆದುಕೊಂಡು ಹೋದ. ಹೋಗುವಾಗ ಕೊಕ್ಕರೆ ಅಲ್ಲಿಂದ ಹಾರಿ ಹೋಯಿತು. ಮತ್ತೊಂದು ಗದ್ದೆಯಲ್ಲಿ ಕುಳಿತು ಕೊಂಡಿತು. ಆ ಗದ್ದೆಯೆಡೆಗೆ ಹೋದ. ಆ ಗದ್ದೆಯ ಹತ್ತಿರ ಹೋದಾಗ ಮತ್ತೂ ಆಚೆಗೆ ಓಡಿಹೋಯಿತು. ಕೊಕ್ಕರೆ ಹಾರುತ್ತಾ ಹೊಳೆಯಾಚೆ ಹೋಯಿತು. ಆದರೆ ಪೆದ್ದ ಕೊಕ್ಕರೆಯ ಬೆನ್ನು ಬಿಡಲಿಲ್ಲ. ಏಕೆಂದರೆ ಕೊಕ್ಕರೆ ಕುಳಿತ ಗದ್ದೆ ಉಳಬೇಕು ಎಂದು ಹೇಳಿದ್ದಾರಲ್ಲ! ಹೋದ. ಹೊಳೆಯಾಚೆ ಹೋದಾಗ ಕೊಕ್ಕರೆ ಒಂದು ಗದ್ದೆಯ ಬಳಿಯಿದ್ದ ಮರದ ಮೇಲೆ ಕೂತಿತು. ಗದ್ದೆಯಲ್ಲಿ ನೀರಿದೆಯೋ ಇಲ್ಲವೋ ಎಂಬುದನ್ನು ನೋಡಲಿಲ್ಲ. ಕೊಕ್ಕರೆ ಮೇಲೆ ಕೂತಿದೆಯಲ್ಲ. ಇದೇ ಗದ್ದೆ ಯಜಮಾನರು ಹೇಳಿದ್ದು ಎಂದು ಎಣಿಸಿದ. ಆ ಗದ್ದೆಯನ್ನು ಉತ್ತ. ನೀರು ಇಲ್ಲದಿದ್ದರೂ ಸಾಧ್ಯವಾದಷ್ಟು ಉತ್ತ.

ಇಲ್ಲಿ ಯಜಮಾನ ತಾನು ಹೇಳಿದ ಗದ್ದೆ ಬಳಿ ಬಂದ. ಇಲ್ಲ. ಉಳಲು ಹೋದ ಹುಡುಗ ಎಲ್ಲಿ ಹೋಯಿತು! ಎಂದು ಹುಡುಕುತ್ತಾ ಬಂದ. ಹುಡುಕಬೇಕಾದರೆ ಸಾಕು ಸಾಕಾಯಿತು. ಜೋರು ಸಿಟ್ಟೂ ಬಂದಿತ್ತು 'ತಲೆ ಸರಿಯಿಲ್ವಾ' ಎಂದು ಸರೀ ಬಯ್ದು. ಅದಕ್ಕೆ ಪೆದ್ದ ಏನು ಹೇಳಿದ ಗೊತ್ತೆ? 'ನೀವು ಕೊಕ್ಕರೆ ಕುಳಿತ ಗದ್ದೆ ಉಳಬೇಕೆಂದು ಹೇಳಿದಿರಿ. ನೋಡಿ, ಇಲ್ಲೆ ಮರದ ಮೇಲಿದೆ ಕೊಕ್ಕರೆ!' ಉಳುವ ಕೆಲಸ ಹೀಗಾಯ್ತು. ಇನ್ನು ಆ ಕೆಲಸ ಕೊಡುವುದು ಬೇಡವೆಂದು ಬೇರೆ ಕೆಲಸ ಕೊಟ್ಟರು. ಯಾವ ಕೆಲಸ? ಆ ಮನೆಯಲ್ಲಿ ಒಂದು ಅಜ್ಜಿಯಿತ್ತು. ಆದರೆ ಮೈ ತುಂಬ ಕಜ್ಜಿ. ಅಜ್ಜಿಯ ಮೈಮೇಲಿನ ಕಜ್ಜಿಗೆ ಬರುವ ನೊಣಗಳನ್ನು ಓಡಿಸುವ ಕೆಲಸ ಕೊಟ್ಟರು. ಈ ಪೆದ್ದ ಹ್ಞಾ ಹ್ಞೂ ಹೇಳದೆ ನೇರ ಅಜ್ಜಿ ಇದ್ದಲ್ಲಿ ಹೋದ. ಹೋಗಿ ಕೈಯಲ್ಲೊಂದು ದೊಣ್ಣೆ ಹಿಡಿದುಕೊಂಡು ಕುಳಿತುಕೊಂಡ. ಅಜ್ಜಿಗೆ ಇವನು ಬಂದದ್ದೇ ಗೊತ್ತಿಲ್ಲ. ಪಾಪ, ನಿದ್ರೆ ಬಂದಿತ್ತು. ಅಷ್ಟೇ ಹೊತ್ತಿಗೆ ಒಂದು ನೊಣ ಬಂದು ಕಾಲಿನಲ್ಲಿ ಕುಳಿತುಕೊಂಡಿತು. ಪೆದ್ದ ಅದನ್ನು ನೋಡಿದ. ದೊಣ್ಣೆ ಎತ್ತಿ ನೊಣಕ್ಕೆ ಗುರಿಯಿಟ್ಟ. ಬೀಸಿ ಒಂದು ಹೊಡೆತ ಕೊಟ್ಟ!

ಮಲಗಿದ ಅಜ್ಜಿಗೆ ಪೆಟ್ಟು ಬಿದ್ದದ್ದೆ ಗೊತ್ತು! ಮಲಗಿದಲ್ಲೆ ಬೊಬ್ಬೆ ಹಾಕಿತು! ಯಜಮಾನ, ಯಜಮಾನ್ತಿ ಓಡಿ ಬಂದರು. ಓಡಿಬಂದು ನೋಡುವಾಗ, ಏನು ನೋಡುವುದು! ಪೆದ್ದ ದೊಣ್ಣೆ ಹಿಡಿದುಕೊಂಡು ಕುಳಿತಿದ್ದಾನೆ. ಅಜ್ಜಿ ನರಳುತ್ತಿದೆ. ನಗಲಿಕ್ಕೂ ಇಲ್ಲ, ಅಳಲಿಕ್ಕೂ ಇಲ್ಲ. ಯಜಮಾನ ಕಣ್ಣು ಕೆಂಪು ಮಾಡಿ ಜೋರು ಮಾಡಿದ.

"ಏಳು, ಹೋಗು ನೀನು ಏನೂ ಮಾಡುವುದು ಬೇಡ. ಒಳಗೆ ಹೋಗಿ ದೇವರ ಹಾಗೆ ಕುಳಿತುಬಿಡು"

ಹೀಗೆ ಜೋರು ಮಾಡಿದ್ದೇ ತಡ, ಹೆದರಿ, ಹೆದರಿ ಒಳಗೆ ಹೋದ. ಹೇಗೆ ಹೇಗೋ ಅಜ್ಜಿಯನ್ನು ಸಮಾಧಾನ ಮಾಡಿದರು. ಬಳಿಕ ಈ ಪೆದ್ದ ಎಲ್ಲಿ ಹೋದನಪ್ಪಾ ಹುಡುಕುತ್ತಾ ಒಳಗೆ ಬಂದಾಗ, ದೇವರ ಪಟದ ಎದುರು ಕೈಕಟ್ಟಿ ಕುಳಿತಿದ್ದಾನೆ ಪೆದ್ದ!

"ಏನೋ, ಇಲ್ಲಿ ಕುಳಿತಿದ್ದು" "ದೇವರ ಹಾಗೆ ಕುಳಿತುಕೋ ಎಂದು ಹೇಳಿದಿರಲ್ಲ!"ಎಂದ.

"ಅಯ್ಯೋ ಮಹಾರಾಯ! ಪೆದ್ದಾಂದ್ರೆ ಶತಪೆದ್ದ! ಏಳು, ಹೋಗಾಚೆ! ನೀನೊಬ್ಬ ಹೇಗೆ ನನಗೆ ಗಂಟುಬಿದ್ದೆಯೋ? ನಿನ್ನನ್ನಿಟ್ಟುಕೊಂಡರೆ ಬರ್ಕತ್ತಿಲ್ಲಪ್ಪ! ಇಂದಿನಿಂದ ನೀನಿಲ್ಲಿ ಕೆಲಸ ಮಾಡುವುದು ಬೇಡ! ನಿನ್ನ ದಾರಿ ನೀನು ನೋಡಿಕೋ...." ಎಂದು ಹೇಳಿ ಪೆದ್ದನನ್ನು ಕಳುಹಿಸಿದ ಯಜಮಾನ.

ಪೆದ್ದ ಅಳುತ್ತಾ, ಅಳುತ್ತಾ ಅಲ್ಲಿಂದ ಹೊರಟ, ಇವನು ಅಳುತ್ತಾ ಹೋಗುವಾಗ ಯಜಮಾನ್ತಿಗೆ ಪಾಪ ಕಂಡಿತು. ಸ್ವಲ್ಪ ತಿನ್ನಲು ಕೊಟ್ಟು "ಅಣ್ಣನ ಮನೆಗೆ ಹೋಗು" ಎಂದು ಹೇಳಿದಳು. ಪೆದ್ದ ಹೊರಟ ಮನೆಗೇ ಹಿಂತಿರುಗಿದ.

ಹೇಳಿದವರು : **ಸುಮತಿ ಅಮ್ಮ, ಕನರಾಡಿ**

ಕಿಲೆಂಜಿ ಬಾಲೆ

ಒಂದು ಬೀಡಿನಲ್ಲಿ ಒಬ್ಬಳು ತಾಯಿಯಿದ್ದಳು. ಅವಳ ಮಗ ಕಾಂತು. ಕಾಂತುವಿಗೆ ಕಿಲೆಂಜಿ ಬಾಲೆಯೊಡನೆ ಮದುವೆಯಾಯಿತು. ಬೆಳಿಗ್ಗೆ ಮದುವೆಯಾಯಿತು, ಸಂಜೆ ದಂಡಿಗೆ (ಯುದ್ಧಕ್ಕೆ) ಕರೆಬಂತು. ಮಗ ಕಾಂತು ತಾಯಿಯೊಡನೆ ಹೇಳಿದ -

"ನನಗೆ ದಂಡಿಗೆ ಕರೆಬಂದಿದೆ ಅಮ್ಮ. ನಾನು ದಂಡಿಗೆ ಹೋಗಿ ಬರುತ್ತೇನೆ ಅಮ್ಮ"

ಅದಕ್ಕೆ ತಾಯಿ ಹೇಳಿದಳು - "ನಿನಗೆ ಬೆಳಿಗ್ಗೆ ಮದುವೆಯಾಯಿತು ಮಗ, ಸಂಜೆ ಯುದ್ಧಕ್ಕೆ ಕರೆ ಬಂತಲ್ಲ! ಕಿಲೆಂಜಿಬಾಲೆಯನ್ನು ಮದುವೆಯಾಗಿ ಅಷ್ಟು ದೊಡ್ಡ ಕಷ್ಟ ಬಂತಲ್ಲಪ್ಪ!"

ಮಗ ಹೇಳಿದ "ಅದೇನು ದೊಡ್ಡದಲ್ಲಮ್ಮ! ಆರು ವರ್ಷದ ಯುದ್ಧವನ್ನು ಆರು ತಿಂಗಳಲ್ಲಿ ಗೆದ್ದು ಬರುತ್ತೇನೆ. ಆರು ತಿಂಗಳಿನ ಯುದ್ಧವನ್ನು ಮೂರು ತಿಂಗಳಲ್ಲಿ ಗೆಲ್ಲುತ್ತೇನೆ. ಮೂರುತಿಂಗಳಿನ ಯುದ್ಧವನ್ನು ಮೂರು ದಿನದಲ್ಲಿ ಗೆಲ್ಲುತ್ತೇನೆ. ಅಮ್ಮ, ನಿಮ್ಮ ಸೊಸೆಯನ್ನು ನಿಮ್ಮ ಚೊಚ್ಚಲ ಮಗಳೆಂದು ತಿಳಿದು ಸಾಕಿರಿ".

ಹೀಗೆ ಹೇಳಿ ಮಗ ಕಾಂತು ಯುದ್ಧಕ್ಕೆ ತೆರಳಿದ. ಕಿಲೆಂಜಿ ಬಾಲೆಗೆ ತನ್ನ ತವರು ಮನೆಯ ಚಿಂತೆವುಂಟಾಯಿತು. ಅತ್ತೆಯೊಡನೆ ಹೇಳಿದಳು - "ನನ್ನ ಹೂವಿನ ತೋಟ ಬಾಡಿ ಹೋಗುತ್ತದೋ ಏನೋ! ಅತ್ತೆ, ಅದಕ್ಕೆ ನೀರು ಹಾಕಬೇಕು. ನನ್ನ ಬೆಕ್ಕಿಗೆ ಯಾರು ಹಾಲು ಹಾಕುತ್ತಾರೋ? ಅತ್ತೆ ನನ್ನ ಬೆಕ್ಕಿಗೆ ಹಾಲು ಹಾಕಬೇಕು. ನನ್ನ ನಾಯಿಗೆ ಯಾರು ತೆಳಿ (ಗಂಜಿ) ಹೊಯ್ಯುತ್ತಾರೋ? ಅತ್ತೆ, ಅದಕ್ಕೆ ತೆಳಿ ಹೊಯ್ಯಬೇಕು. ನನ್ನ ಮನೆಗೆ ಹೋಗಿ ಬರುತ್ತೇನೆ ಅತ್ತೆ?"

ಕಿಲೆಂಜಿಬಾಲೆ ಹಟ ಮಾಡಿದಳು. ಅತ್ತೆ ಮನೆಯಿಂದ ಸೊಸೆ ಹೊರಟಳು.

ಸೊಸೆ ಮನೆಯಿಂದ ಹೊರಟಕೂಡಲೇ ಅತ್ತೆ ಕೆಲಸದವನನ್ನು ಕರೆದು "ಏಳುಮಲೆ (ಅರಣ್ಯ)ಗೆ ಹೋಗು. ಒಂದು ಕಡಂಬಳ (ವಿಷದ ಹಾವು)ವನ್ನು ಕೊಂದು ತಾ" ಎಂದು ಹೇಳಿದಳು.

ಕೆಲಸದವನು ಏಳುಮಲೆಗೆ ಹೋದ. ಒಂದು ದೊಡ್ಡ ಕಡಂಬಳ ಹಾವನ್ನು ಕೊಂದ. ಈ ಅತ್ತೆಗೆ ತಂದುಕೊಟ್ಟ.

ಅತ್ತೆ ಕಡಂಬಳ ಹಾವಿನ ಮಾಂಸವನ್ನು ತೆಗೆದಳು, ಪದಾರ್ಥ ಮಾಡಿದ್ಳು. ಅದರ ಚರ್ಮ ತೆಗೆದಳು, ಸೊಸೆಯ ಹಾಸಿಗೆಗೆ ಹಾಕಿದಳು. ರಕ್ತವನ್ನು ತೆಗೆದಳು, ಸ್ನಾನದ ನೀರಿಗೆ ಹಾಕಿ ಬೆರೆಸಿದಳು.

ಇಲ್ಲಿ ತವರು ಮನೆಗೆ ಹೋದ ಕಿಲೆಂಜಿಬಾಲೆ ತನ್ನ ತಾಯಿಯೊಡನೆ ಹೇಳಿದಳು - "ಅಮ್ಮ, ತುಂಬ ಸಮಯವಾಯಿತು. ಅತ್ತೆಯವರು ಜೋರು ಮಾಡಬಹುದು" ಎಂದು ಕಿಲೆಂಜಿಬಾಲೆ ತವರು ಮನೆಯಿಂದ ಹಿಂತಿರುಗಿದಳು. ಅತ್ತೆ ಮನೆಗೆ ಬಂದಳು.

ಅತ್ತೆ ಕಿಲೆಂಜಿಬಾಲೆಯೊಡನೆ ಹೇಳಿದಳು. "ಗುಡಾಣದಲ್ಲಿ ಬಿಸಿ ನೀರಿದೆ. ಮೈ ಕೊಳೆ ತೊಳೆಯಲು ಸ್ನಾನ ಮಾಡು. ಹೊಟ್ಟೆ ಹಸಿವಿಗೆ ಊಟಮಾಡು. ಬಳಿಕ ಹಾಸಿಗೆಯಲ್ಲಿ ಮಲಗು"

ಸೊಸೆ ಮೆಯ್ಯ ಕೊಳೆಗೆ ಸ್ನಾನ ಮಾಡಿದಳು. ಸ್ನಾನ ಮಾಡುವಾಗ ನೀರು ಕೆಂಪು ಕೆಂಪು ಕಾಣಿಸಿತ್ತು. ಅತ್ತೆಯೊಡನೆ ಕೇಳಿದಳು" ಬಿಸಿ ನೀರಿನ ಬಣ್ಣ ಕೆಂಪು ಕೆಂಪಾಗಿ ಕಾಣುತ್ತಿದೆ ಯಾಕೆ?"

"ಬಿಸಿಲಿನಲ್ಲಿ ಬಂದರೆ ಹಾಗೆಯೇ ಕಾಣುವುದು" ಎಂದಳು ಅತ್ತೆ. ಕಿಲೆಂಜಿ ಬಾಲೆ ಸ್ನಾನ ಮಾಡಿ ಬಂದಳು. ಹೊಟ್ಟೆಯ ಹಸಿವೆಗೆ ಊಟ ಮಾಡಿದಳು. ಊಟ ಮಾಡುವಾಗ ಅವಳಿಗೆ ತುಂಬ ಸಂಕಟವಾಯಿತು. "ನನಗೆ ಸಂಕಟವಾಗುತ್ತಿದೆ ಅತ್ತೆಯವರೆ" ಎಂದು ಕೇಳಿದಳು ಕಿಲೆಂಜಿಬಾಲೆ. ಅದಕ್ಕೆ ಅತ್ತೆ ಹೇಳಿದಳು "ಬಿಸಿಲಿನಲ್ಲಿ ಬಂದರೆ ಹಾಗೆಯೇ ಸಂಕಟ ಆಗುತ್ತದೆ. ಸ್ವಲ್ಪ ಊಟ ಮಾಡು ನೋಡೋಣ"

ಹೊಟ್ಟೆಯಲ್ಲಿ ತಡೆಯಲಾರದ ಸಂಕಟವಾಗುತ್ತದೆಂದು ಬಿಸಿನೀರನ್ನು ಕುಡಿದಳು. ಮತ್ತೆ "ಅಯ್ಯೋ, ಸಂಕಟ ತಡೆಯಲಿಕ್ಕಾಗುವುದಿಲ್ಲ ಅತ್ತೆಯವರೆ" ಎಂದಳು ಕಿಲೆಂಜಿಬಾಲೆ.

ಅದಕ್ಕೆ ಅತ್ತೆ ಹೇಳಿದಳು " ಹಾಗಾದರೆ ಹಾಸಿಗೆಯಲ್ಲಿ ಮಲಗು ಮಗ"

ಕಿಲೆಂಜಿ ಬಾಲೆ ಹಾಸಿಗೆಯಲ್ಲಿ ಮಲಗಿದಳು. ಅತ್ತೆ ಕೋಣೆಯ ಬಾಗಿಲು ಹಾಕಿದಳು. ಬೀಗ ಹಾಕಿಬಿಟ್ಟಳು. ಬಳಿಕ ಕೆಲಸದವನನ್ನು ಕರೆದಳು. ಅವನಿಗೆ ಹೇಳಿದಳು" ಎಲ್ಲರನ್ನೂ ಸೇರಿಸು. ಒಂದು ಗಂಟೆಯೊಳಗೆ ಮರವನ್ನು ಕಡಿದು, ಕಟ್ಟಿಗೆ ಕೂಡಿ, ಕಿಲೆಂಜಿಬಾಲೆಯನ್ನು ಸುಡಬೇಕು".

ಎಲ್ಲ ಸೇರಿದರು. ಮರ ಕಡಿದರು. ಕಟ್ಟಿಗೆ ಕೂಡಿದರು. ಹೆಣವನ್ನು ಕೂಡಿದ ಕಟ್ಟಿಗೆಯ ಮೇಲಿಟ್ಟರು. ಆಗ ಅತ್ತೆ ಊಳಿಗದ ಮಡಿವಾಳನನ್ನು ಕರೆದು ಹೇಳಿದರು. "ಕಿಲೆಂಜಿಬಾಲೆ ಬೀಡಿಗೆ ದೂರ, ಮುಂಭಾಗದ ಮನೆ ಹತ್ತಿರವಾಗಿದ್ದಾಳೆ (ಮೈ ನೆರೆತಿದ್ದಾಳೆ.) ಅವಳ ತಂದೆ ತಾಯಿ ಬರಲಿ. ಊಳಿಗ ಮಡಿವಾಳನನ್ನು ಕಳುಹಿಸಿಕೊಟ್ಟಳು.

ಊಳಿಗದ ಮಡಿವಾಳ ಕಿಲೆಂಜಿಬಾಲೆಯ ತವರು ಮನೆಗೆ ಹೋದ. ಹೋಗಿ ಹೇಳಿದ - "ಕಿಲೆಂಜಿಬಾಲೆ ಬೀಡಿಗೆ ದೂರ, ಮುಂಭಾಗದ ಮನೆಗೆ ಹತ್ತಿರವಾಗಿದ್ದಾಳೆ. ನೀವೆಲ್ಲ ಬರಬೇಕಂತೆ".

ಊಳಿಗದ ಮಡಿವಾಳ ಹಿಂದೆ ಬಂದ. ಕಿಲೆಂಜಿಬಾಲೆಯ ತಂದೆತಾಯಿಗೆ ಸಂತೋಷವಾಯಿತು. ಎಲ್ಲ ಜನರನ್ನು ಕೂಡಿಕೊಂಡು ಬಂದರು. ಹೂಸಿಂಗಾರ ಹಿಡಿದುಕೊಂಡು ಬಂದರು. ಬರುವಾಗ ದಾರಿಯಲ್ಲಿ ಯುದ್ಧದಲ್ಲಿ ಗೆದ್ದು ಬಂದ ಕಾಂತು ಬರುತ್ತಿದ್ದಾನೆ.

ಆಗ ಕಾಂತು ಕೇಳಿದ "ಏನು, ಎಲ್ಲಿಗೆ ಹೊರಟಿದ್ದೀರಿ?"

"ನಮ್ಮ ಕಿಲೆಂಜಿಬಾಲೆ ಬೀಡಿಗೆ ದೂರ, ಮುಂಬಾಗದ ಮನೆಗೆ ಹತ್ತಿರವಾಗಿದ್ದಾಳಂತೆ. ಅದಕ್ಕೆ ನಾವೆಲ್ಲ ಸೇರಿಕೊಂಡು "ಒಸಗೆ" ಹೋಗುತ್ತಿದ್ದೇವೆ." ಎಂದು ತಾಯಿ ಹೇಳಿದಳು.

ಆಗ ಗಂಡ ಕಾಂತು ಕೂಡಾ ಪೇಟೆಗೆ ಹೋಗಿ ಒಂದಷ್ಟು ಹೂ ತೆಗೆದುಕೊಂಡು ಬಂದ. ತಂದೆ, ತಾಯಿ, ಗಂಡ ಎಲ್ಲ ಸೇರಿಕೊಂಡು ಬಂದರು. ಹೊಳೆಯ ಈಚೆ ದಡದಲ್ಲಿ ಬರುತ್ತಿರುವಾಗ, ಆಚೆ ಬದಿಯಲ್ಲಿ ಹೆಣ ಸುಡುವ ಹೊಗೆ ಕಾಣುತ್ತಿದೆ.

ಆಗ ಕಾಂತು ಕೇಳಿದ " ಅದೇನು ಅಷ್ಟು ಹೊಗೆ ಹೋಗುತ್ತಿದೆ?"

"ಬೇಸಿಗೆಯಲ್ಲಿ ಬೇಲಿಬಲ್ಲೆ ಕಡಿಯುತ್ತಾರೆ. ಕಡಿದು ಸುಡುಮಣ್ಣು ಇಡುತ್ತಾರೆ. ಹಾಗೆ ಸುಡುಮಣ್ಣು ಇಟ್ಟಿದ್ದಾರೋ ಏನೋ?" ಎಂದು ತಂದೆ ಹೇಳಿದ.

ಸ್ವಲ್ಪ ದೂರ ಹೋದಾಗ ನೆರೆಕರೆಯ ಹೆಣ್ಣು ಮಕ್ಕಳು ಮಾತನಾಡಿಕೊಳ್ಳುತ್ತಿದ್ದರು - ಮೊನ್ನೆ ಬೆಳಿಗ್ಗೆ ಮದುವೆಯಾದ, ಸಂಜೆ ಯುದ್ಧಕ್ಕೆ ಹೋದ, ನಿನ್ನೆ ಹೆಣ್ಣು ತಾಯಿಮನೆಗೆ ಹೋಯಿತು. ಇವತ್ತು ಹೆಣ್ಣು ಬೆಂಕಿಯಲ್ಲಿ ಸುಟ್ಟು ಹೋಗುತ್ತಿದೆ".

ಈ ಮಾತನ್ನು ಕೇಳಿ ಕಾಂತು ಹೇಳಿದ "ನೋಡಿ ಅತ್ತೆ, ಅವರು ಯಾಕೆ ಹಾಗೆ ಮಾಡುತ್ತಿದ್ದಾರೆ?"

ಕಂಬಳ ಗದ್ದೆಯ ಅಂಚಿನಲ್ಲಿ ಹೋಗುವಾಗ ಬೆಂಕಿಯ ಉರಿಗೆ ತೆಂಗಿನ ಮರದ ಎಳೆಯ ಗರಿ ಒಮ್ಮೆ ಆಚೆ ಒಮ್ಮೆ ಈಚೆ ವಾಲುತ್ತಿದೆ. ಹೆಣ ಸುಟ್ಟು ನಡುಭಾಗ ಪೂರ್ಣ ಸುಡಲು ಸುರುವಾಗಿದೆ. ತಂದೆ, ತಾಯಿ, ಕಾಂತು ಹತ್ತಿರಹೋದರು.

"ಅಯ್ಯೋ ಮಗ ಕಿಲೆಂಜಿ ಬಾಲೆಯೋ" ಎಂದು ಬೊಬ್ಬೆ ಹಾಕಿದರು. ನಾಲ್ಕು ಮಂದಿ ಅವರನ್ನು ಹಿಡಿದುಕೊಂಡರು.

ಆದರೆ ಗಂಡ ಕಾಂತು "ಅಯ್ಯೋ ನನ್ನ ಕಿಲೆಂಜಿಬಾಲೆ" ಎಂದು ಹೇಳುತ್ತಾ ಹೋಗಿ, ಹೋಗಿ ಬೆಂಕಿಗೆ ಹಾರಿದ. ಹಾರಿದ ಬಳಿಕ ಏಳು ರಾತ್ರಿ, ಏಳು ಹಗಲು ಅಳುತ್ತಾ ಇದ್ದ. ಕೂಡಿದ ಕಟ್ಟಿಗೆಯಿಂದ ಏಳಲಿಲ್ಲ.

ಹೀಗೆ ಕಣ್ಣೀರಿಡುತ್ತಿರುವಾಗ ಏಳುಮಂದಿ ಸಿರಿಗಳು (ದೇವತೆಗಳು) ಬಂದರು. ಏಳು ವರ್ಷದ ಹೆಣ್ಣು ಮಗಳನ್ನು ಅವನ ಬಳಿ ಸೃಷ್ಟಿಮಾಡಿದರು. ಸಿರಿಗಳು ಹೋದರು.

ಏಳು ವರ್ಷದ ಹೆಣ್ಣು ಮಗಳನ್ನು ಕರೆದುಕೊಂಡು ಬಂದ ಕಾಂತು. ತಾಯಿ ಮನೆಗೆ ಬಂದ. ಮನೆಯ ಮುಂದಿನ ಕೆಂದಾಳಿ ತೆಂಗಿನ ಮರದ ಕಟ್ಟೆಯಲ್ಲಿ ಮಗುವನ್ನು ನಿಲ್ಲಿಸಿದ. ಮನೆಗೆ ಹೋಗಿ "ಅಮ್ಮಾ ಅಮ್ಮಾ" ಎಂದು ಮೂರು ಬಾರಿ ಕರೆದ. ಆಗ ತಾಯಿ ಹೇಳಿದಳು. "ನಿನ್ನ ಕಿಲೆಂಜಿಬಾಲೆ ತವರು ಮನೆಗೆ ಹೋದವಳು ಬರಲಿಲ್ಲ"

ಇಷ್ಟು ಮಾತು ಕೇಳಿದ ಕಾಂತು, ನೇರ ಬಂದ. ತನ್ನ ಅತ್ತೆ, ಮಾವ ಇದ್ದಲ್ಲಿಗೆ ಬಂದ. ಮಾವನೊಡನೆ ಹೇಳಿದ "ಊರಿನವರನ್ನೆಲ್ಲ ಸೇರಿಸಬೇಕು. ಒಂದು ಸಮಾರಾಧನೆ ಮಾಡಬೇಕು. ಎಲ್ಲರಿಗೂ ಊಟ ಹಾಕಬೇಕು. ಅದಕ್ಕೆ ನನ್ನ ತಾಯಿಯನ್ನು ಕರೆಯಬೇಕು".

ಸಮಾರಾಧನೆ ಊಟ ನಡೆಯುತ್ತಾ ಇದೆ. ತನ್ನ ತಾಯಿಯನ್ನು ಮತ್ತು ಸೊಸೆಯನ್ನು ಎದುರುಬದುರಾಗಿ ಕುಳ್ಳಿರಿಸಿದ್ದಾನೆ.

"ನಿಮ್ಮ ಚೊಚ್ಚಲ ಮಗಳು ಅಮ್ಮಾ. ಇವಳು ತುಪ್ಪ ಬಡಿಸುತ್ತಾಳೆ" ಎಂದು ಹೇಳಿದ ತಾಯಿಗೆ ಒಂದು ಸಿದ್ದೆ ತುಪ್ಪ ಹಾಕಿಸಿದ.

"ಅತ್ತೆಯವರೆ, ಚೆನ್ನಾಗಿ ಊಟ ಮಾಡಿ" ಎಂದಳು ಕಿಲೆಂಜಿಬಾಲೆ. ಸಮಾರಾಧನೆಯ ಊಟವಾಯ್ತು. ನಾಲ್ಕು ಜನ ಸೇರಿದಲ್ಲಿ ತಾಯಿಯ ಮರಣವಾಯಿತು. ತಾಯಿಯ ಅಂತಿಮ ಕೆಲಸ ಕೂಡಲೇ ಆಗಬೇಕೆಂದು ಬೇಗಬೇಗ ಮಾಡಿಸಿದ ಕಾಂತು.

ಹೇಳಿದವರು : **ಕೊರಪಲ್ ಪರತಿ, ಬಂಟ್ವಾಳ**

ಮಂಗಣ್ಣನ ಕತೆ

ಒಂದು ಊರಿನಲ್ಲಿ ಒಬ್ಬಳು ಅಜ್ಜಿ. ಅವಳಿಗೊಂದು ಪುಳ್ಳಿ (ಮೊಮ್ಮಗಳು) ಅಜ್ಜಿ ನಾಲ್ಕು ಊರು ಬೇಡಿ, ಅಕ್ಕಿ ತಂದು ಕೊಡುತ್ತಿದ್ದಳು. ಪುಳ್ಳಿ (ಮೊಮ್ಮಗಳು) ಅಕ್ಕಿ ಬೇಯಿಸಿ ಅನ್ನಮಾಡಿ ಹಾಕುತ್ತಿದ್ದಳು.

ಹೀಗಿರುವಾಗ ಒಂದು ದಿನ ಒಬ್ಬ ಒಂದು ಮಂಗನನ್ನು ಮಾರುತ್ತಾ ಬಂದ. ಮೊಮ್ಮಗಳು ಮಂಗನನ್ನು ನೋಡಿದಳು. ಅವಳಿಗೆ ಮಂಗನ ಮೇಲೆ ತುಂಬ ಪ್ರೀತಿಯುಂಟಾಯಿತು. ಅಜ್ಜಿ ಬೇಡಿ ತಂದ ಅಕ್ಕಿಯನ್ನು ಕೊಟ್ಟಳು. ಮಂಗನನ್ನು ಕೊಂಡುಕೊಂಡಳು. ಅಜ್ಜಿ ನಾಲ್ಕು ಊರು ಬೇಡಿ ಬಂದಾಗ, ಪುಳ್ಳಿ ಗಂಜಿ ಮಾಡಿರಲಿಲ್ಲ. ಅಜ್ಜಿ ಪುಳ್ಳಿಯೊಡನೆ ಕೇಳಿದಳು. "ಅಕ್ಕಿ ಎಲ್ಲಿ ಹೋಯಿತು ಮಗಾ"?

"ನಾನೊಂದು ಮಂಗನನ್ನು ತೆಗೆದುಕೊಂಡೆ ಅಜ್ಜಿ" ಎಂದಳು ಮೊಮ್ಮಗಳು.

"ಮಂಗನನ್ನು ತೆಗೆದುಕೊಂಡರೆ ಏನು ಪ್ರಯೋಜನ? ನಮಗೆ ಹಸಿವಿಗೆ ಗಂಜಿ ಊಟ ಮಾಡಬೇಕಲ್ಲ? ಯಾಕೆ ಮಂಗನನ್ನು ತೆಗೆದುಕೊಂಡೆ ಮಗ?" ಎಂದು ಅಜ್ಜಿ ಮೊಮ್ಮಗಳಿಗೆ ಬೈದಳು.

ಆಗ ಮೊಮ್ಮಗಳು - " ಮಂಗನ ಮೇಲೆ ನನಗೆ ಏನೋ ಪ್ರೀತಿ ಉಂಟಾಯಿತು. ಅದಕ್ಕೆ ನಾನು ತೆಗೆದುಕೊಂಡೆ ಎಂದಳು.

ಮರುದಿನ ಮಂಗ ಶುರುಮಾಡಿತು. ಎಲ್ಲ ಕಡೆಗೆ ಹೋಗುವುದು, ತರಕಾರಿ ಹಣ್ಣು ತರುವುದು ಹೀಗೆ ಮಾಡಿದಾಗ ಅಜ್ಜಿಗೂ ಪ್ರೀತಿ ಉಂಟಾಯಿತು. ಮಂಗನನ್ನು ತೆಗೆದುಕೊಂಡರೂ ಪರವಾಗಿಲ್ಲ. ನನಗೊಂದು ಉಪಕಾರ ಆಯಿತಲ್ಲಾ ಎಂದು ಅಜ್ಜಿ ಭಾವಿಸಿದಳು.

ಹೀಗೆ ಇರುವಾಗ ಒಂದು ದಿನ ಮಂಗ ತಿರುಗಾಡಲು ಹೋಯಿತು. ಹೋಗಿ ಹೋಗಿ ಹೋಗುವಾಗ ಒಬ್ಬ ದೊಡ್ಡ ರಕ್ಕಸ ಸಿಕ್ಕಿದ. ಆ ರಕ್ಕಸ ಮಂಗಣ್ಣನಿಗೆ ಹೇಳಿದ "ನನಗೊಂದು ಮದುವೆ ಆಗಬೇಕಲ್ಲ ಮಂಗಣ್ಣ"

ಅದಕ್ಕೆ ಮಂಗ ಹೇಳಿತು. "ಮದುವೆಯಾ! ಪರವಾಗಿಲ್ಲ ಮಾಡುವಾ ನನಗೊಬ್ಬಳು ತಂಗಿ ಇದ್ದಾಳೆ. ಅವಳನ್ನು ನಿನಗೆ ಕೊಡುತ್ತೇನೆ. ಆದರೆ ಒಂದು ಮಾತು ನೀನು ಅವಳಿಗೆ ಹೊಡೆಯಬಾರದು. ನೋಯಿಸಬಾರದು. ಏಕೆಂದರೆ ಅವಳು ತುಂಬ ನಾಚಿಕೆಯವಳು".

ಅದಕ್ಕೆ ರಾಕ್ಷಸ ಒಪ್ಪಿದ. ಹಾಗಾದರೆ ನಾಡಿದ್ದು ಆದಿತ್ಯವಾರ ದಿಬ್ಬಣ ತೆಗೆದುಕೊಂಡು ಬರುತ್ತೇನೆಂದು ಮಂಗಣ್ಣ ಹೇಳಿತು. ಆಗ ರಾಕ್ಷಸನು ಮಂಗಣ್ಣನನ್ನು ತನ್ನ ಮನೆಗೆ ಕರೆಸಿದ ರಾಕ್ಷಸನ ಮನೆಯಲ್ಲಿ ತುಂಬ ಸಂಪತ್ತು ಇತ್ತು. ಒಂದು ಅಂತಸ್ತಿನಲ್ಲಿ ಮುತ್ತು. ಮತ್ತೊಂದರಲ್ಲಿ ರತ್ನ, ಒಂದು ಅಂತಸ್ತಿನಲ್ಲಿ ಬೆಳ್ಳಿ. ಮತ್ತೊಂದರಲ್ಲಿ ಚಿನ್ನ ಹೀಗೆ ತುಂಬ ಸಂಪತ್ತು ನೋಡಿತು. ಮಂಗಣ್ಣ ಎಲ್ಲ ಅಂತಸ್ತಿಗೆ ಹೋಯಿತು. ಅಲ್ಲಿ ಇಲ್ಲಿ ಹೊರಳಾಡಿ ಬೆಳ್ಳಿ, ಚಿನ್ನವನ್ನೆಲ್ಲಾ ರೋಮದಲ್ಲಿ ಸಿಕ್ಕಿಸಿಕೊಂಡಿತು. ಹಾಗೆಯೆ ಅಜ್ಜಿ ಮನೆಗೆ ಬಂತು. ರೋಮದಲ್ಲಿದ್ದ ಬೆಳ್ಳಿ, ಚಿನ್ನವನ್ನೆಲ್ಲಾ ಮನೆಯಲ್ಲಿ ಕೊಡವಿತು. ಮಂಗನ ಮೈಯಿಂದ ಬೆಳ್ಳಿ ಚಿನ್ನವೆಲ್ಲಾ ಬಿತ್ತು. ಅದನ್ನು ನೋಡಿ ಅಜ್ಜಿಗೆ ತುಂಬ ಖುಶಿಯಾಯಿತು. ನನ್ನ ಮೊಮ್ಮಗಳು ಮಂಗಣ್ಣನನ್ನು ತೆಗೆದುಕೊಂಡದ್ದು ಉಪಕಾರವಾಯಿತು ಎಂದು ಎಣಿಸಿದಳು.

ಮಂಗ ಮನೆಯಲ್ಲಿ ಆಲೋಚನೆ ಮಾಡಿತು. ನನ್ನ ತಂಗಿಯನ್ನು ರಾಕ್ಷಸನಿಗೆ ಮದುವೆ ಮಾಡಿ ಕೊಡುವುದಾ? ಹಾಗೆ ಮಾಡಿದರೆ ತಂಗಿ ಉಳಿಯುತ್ತಾಳಾ? ಹ್ಞಾ, ಇದಕ್ಕೊಂದು ಉಪಾಯ ಮಾಡಬೇಕು ಎಂದು ಮನಸ್ಸಿನಲ್ಲೆ ಎಣಿಸಿತು.

ಮಂಗಣ್ಣ ಒಂದು ಗೊಂಬೆಯ ರೂಪ ಮಾಡಿತು. ಅದಕ್ಕೆ ಚೆಂದ ಮಾಡಿ ಸೀರೆ ಉಡುಸಿತು. ಬಳಿಕ ಅಜ್ಜಿಗೆ ಹೇಳಿತು. "ಅಜ್ಜೀ ಅಜ್ಜಿ ಒಬ್ಬ ರಕ್ಕಸ ಇದ್ದಾನೆ. ಅವನಿಗೆ ನನ್ನ ತಂಗಿಯನ್ನು ಕೊಡುತ್ತೇನೆ ಎಂದಿದ್ದೆ. ಇವತ್ತು ನಾನು ನೀನು ಹೋಗೋಣ."

ಅಜ್ಜಿಯೂ, ಮಂಗನೂ, ಜೊತೆಗೆ ಹೋದರು. ಈ ಗೊಂಬೆಯ ಹೆಣ್ಣಿನ ರೂಪವನ್ನು ತೆಗೆದುಕೊಂಡು ಹೋದರು. ಆ ರಾಕ್ಷಸನಿಗೆ ಧಾರೆಯೆರೆದು ಕೊಟ್ಟರು. ಧಾರೆಯೆರೆದ ಬಳಿಕ ಆ ಹೆಣ್ಣು ಗೊಂಬೆಯನ್ನು ಎತ್ತಿ ಬಾಗಿಲಿನ ಮೂಲೆಯಲ್ಲಿ ನಿಲ್ಲಿಸಿತು ಮಂಗ, ಮತ್ತು ರಾಕ್ಷಸನೊಡನೆ ಹೇಳಿತು "ನೋಡು ನನ್ನ ತಂಗಿ ತುಂಬ ಪಾಪದವಳು. ನೀನು ಏನು ಹೇಳಿದರು ಅವಳು ಮಾತನಾಡುವುದಿಲ್ಲ.ಅವಳಿಗೆ ತುಂಬ ನಾಚಿಕೆ. ನೀನು ಹೊಡೆಯಬಾರದು, ನೋಯಿಸಬಾರದು. ನಾವು ಹೋಗುತ್ತೇವೆ ಎಂದು ಹೇಳಿದಾಗ ಅದಕ್ಕೆ ರಾಕ್ಷಸ ಒಪ್ಪಿದ. ಹಾಗೆಯೆ ಅಜ್ಜಿಯೂ, ಮಂಗನೂ ಮನೆಗೆ ಬಂದರು.

ಇಲ್ಲಿ ರಾಕ್ಷಸ ಹೆಂಡತಿಗೆ ಹೇಳುತ್ತಿದ್ದ "ಏಳೇ ಚಾ ಮಾಡೆ, ಅಡುಗೆ ಮಾಡೆ" ಏನು ಹೇಳಿದರು ಹೆಂಡತಿ ಮಾತನಾಡುವುದಿಲ್ಲ, ಗೊಂಬೆಯಲ್ವ! ಆಗ ರಕ್ಕಸನಿಗೆ ತುಂಬ ಸಿಟ್ಟು ಬಂತು. "ಏನು, ನಾನು

ಇಷ್ಟು ಹೇಳಿದರೂ ನಿನಗೆ ನಾಚಿಕೆಯಾ? ಒಂದು ಚಾ ಮಾಡು ಎಂದರೂ ಏಳುವುದಿಲ್ಲವಾ" ಎಂದು ರಾಕ್ಷಸನು ಆ ಹೆಣ್ಣಿನ ಗೊಂಬೆಯನ್ನು ಎಳೆದು ಹೊರಗೆ ದಾರಿಗೆ ಎಸೆದ!

ಹೆಣ್ಣಿನ ಗೊಂಬೆ ದಾರಿಯಲ್ಲಿ ಬಿತ್ತು. ಆಗ ಈಶ್ವರ ದೇವರು ಮತ್ತು ಪಾರ್ವತಿ ದೇವರು ಸಂಚಾರ ಹೋಗುತ್ತಿದ್ದರು. ಹೋಗುವಾಗ ಪಾರ್ವತಿ ನೋಡಿ ಹೇಳುತ್ತಾರೆ - "ನೋಡಿ, ದೇವರೇ ಒಂದು ಹೆಣ್ಣಿನ ರೂಪ ದಾರಿಯಲ್ಲಿ ಬಿದ್ದಿದೆ. ಎಷ್ಟು ಚೆಂದ ಇದೆ ನೋಡಿ".

ಅದಕ್ಕೆ ಈಶ್ವರ ದೇವರು ಹೇಳಿದರು - "ಹೌದು, ಅಯ್ಯೋ ಪಾರ್ವತಿ ನೀನು ಬರಬೇಡ ಎಂದು ಹೇಳಿದೆ. ಆದರೆ ಹಟ ಮಾಡಿ ನನ್ನೊಡನೆ ಬಂದೆ. ನೀನು ಬಂದು ನನಗೆ ಪಾಪ ಹೊರಿಸಿದೆ. ಆಗಲಿ ನೀನು ಪಲ್ಲಕಿಯಿಂದ ಕೆಳಗೆ ಇಳಿ. ನಾಗ ದರ್ಬೆಯ ಕಡ್ಡಿಯನ್ನು ಹಿಡಿ, ತಂಬಿಗೆಯ ಸಿರಿಗಿಂಡಿಯನ್ನು ಹಿಡಿ. ಜೀವ ಕಲೆಯನ್ನು ಹುಟ್ಟಿಸು. ಅದು ಗೊಂಬೆಯ ರೂಪ".

ಆಗ ಪಾರ್ವತಿ ಕೆಳಗೆ ಇಳಿದರು. ನಾಗದರ್ಬೆಯ ಕಡ್ಡಿ ಹಿಡಿದರು. ತಾಮ್ರದ ಸಿರಿಗಿಂಡಿ ಹಿಡಿದರು. ಆ ಗೊಂಬೆಯ ರೂಪಕ್ಕೆ ನೀರು ಬಿಟ್ಟರು. ಆಗ ಗೊಂಬೆಯ ರೂಪಕ್ಕೆ ಜೀವ ಬಂತು. ಆ ಹೆಣ್ಣು ಎದ್ದು ಕುಳಿತುಕೊಂಡಳು. ರಾಕ್ಷಸ ನೋಡಿದಾಗ ದಾರಿಯಲ್ಲಿ ಹೆಣ್ಣು ಕುಳಿತುಕೊಂಡಿದ್ದಾಳೆ. ಯಾಕೆ ಕುಳಿತಿರುವೆ ಎಂದು ಕೈ ಹಿಡಿದು ಕರೆದುಕೊಂಡು ಬಂದ ರಾಕ್ಷಸ. ಹೀಗೆ ಬಂದ ಬಳಿಕ ರಾಕ್ಷಸ ಹೇಗಿದ್ದಾನೆ ನೋಡೋಣ ಎಂದು ಮಂಗಣ್ಣ ಮೆಲ್ಲನೆ ಅಲ್ಲಿಗೆ ಬಂತು. ಬಂದು ನೋಡುವಾಗ ಹೆಣ್ಣು ಜೀವ ಪಡೆದಿದೆ. ಎಂತಹ ಪವಾಡ! ಈಗ ಇದಕ್ಕೆ ಏನು ಉಪಾಯ ಮಾಡುವುದು? ಮಂಗಣ್ಣ ನೇರ ಮನೆಗೆ ಹೋಯಿತು. ಒಂದು ಚಿತೆಯನ್ನು ತಯಾರಿಸಿತು. ಚಿತೆಯನ್ನು ತಯಾರಿಸಿ ಓಡಿ ಬಂತು. ಓಡಿ ಓಡಿ ಬಂದು ರಾಕ್ಷಸನ ಮನೆಗೆ ಬಂತು. ರಾಕ್ಷಸನೊಡನೆ ಹೇಳಿತು - "ಓ ಭಾವ, ಓ ಭಾವ " ಏನು?

"ಅಲ್ಲಿ ಅಜ್ಜಿ ಸತ್ತು ಹೋಗಿದೆಯಲ್ಲಾ? ಅಲ್ಲಿ ಚಿತೆಯನ್ನು ತಯಾರಿಸಿದ್ದಾರೆ. ಅಲ್ಲಿ ಯಾರು ಇಲ್ಲ. ಅದಕ್ಕೆ ನಿನ್ನನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ. ನನ್ನ ತಂಗಿಯೂ ಬರಬೇಕು. ನೀನೂ ಬರಬೇಕು ಎಂದು ಮಂಗಣ್ಣ ರಾಕ್ಷಸನನ್ನು ಕರೆದುಕೊಂಡು ಬಂತು. ಉರಿಯುತ್ತಿರುವ ಚಿತೆಯ ಮುಂದೆ ರಾಕ್ಷಸನೊಡನೆ ಮಂಗ ಹೇಳಿತು - "ಓ ಭಾವ ನನ್ನ ಅಜ್ಜಿ ಸತ್ತು ಹೋಯಿತು. ಇನ್ನು ನಾನು ಬದುಕಬೇಕಾ ಭಾವ? ಎಂದು ಹೇಳಿ ಚಿತೆಯ ಆಚೆಗೆ ಹಾರಿತು. ಹೊಗೆಯಲ್ಲಿ ಆಚೆ ಹಾರಿದ್ದು ಕಾಣಲಿಲ್ಲ. ಆಗ ರಾಕ್ಷಸನು ನನ್ನ ಭಾವ ಚಿತಿಗೆ ಹಾರಿದನಲ್ಲಾ ಎಂದು ತಾನು ಬೆಂಕಿಗೆ ಹಾರಿದ. ಆ ಚಿತೆಯಲ್ಲಿ ರಾಕ್ಷಸ ಸುಟ್ಟು ಹೋದ. ರಾಕ್ಷಸ ಸತ್ತ ಬಳಿಕ ಅವನ ಅರಮನೆಯ ಆಸ್ತಿ, ಸಂಪತ್ತು, ಬೆಳ್ಳಿ, ಬಂಗಾರ, ಮುತ್ತು - ರತ್ನ ಎಲ್ಲಾ ಮಂಗಣ್ಣನಿಗೆ ಆಯಿತು.

ಆ ಬಳಿಕ ಮಂಗಣ್ಣ, ತಂಗಿ ಮತ್ತು ಅಜ್ಜಿ ಎಲ್ಲರೂ ಬಹಳ ಸಂತೋಷದಿಂದ ಇದ್ದರು. ನಿನ್ನೆ ಅಲ್ಲಾ ಮೊನ್ನೆ ನೋಡಿ ಬಂದೆ. ನಾಳೆ ನೀವು ಹೋಗಿ.

ಹೇಳಿದವರು : **ರುಕ್ಮಿಣಿ ಪೂಜಾರ್ತಿ, ಬಾಳ**

ಒಂದು ಎಳ್ಳಿನಲ್ಲಿ ಒಂದು ಜೋಡಿ ಚಿನ್ನದ ಓಲೆ

ಒಂದು ಊರಿನಲ್ಲಿ ಒಬ್ಬಳು ಮುದುಕಿ. ಅವಳು ಬೇಸಾಯ ಮಾಡುವುದರಲ್ಲಿ ಬಹಳ ಬುದ್ಧಿವಂತಳು. ಒಮ್ಮೆ ಅವಳು ಪೇಟೆಗೆ ಹೋಗುವಾಗ ಅಂಗಡಿಯಲ್ಲಿ ಒಂದು ಎಳ್ಳು ಸಿಕ್ಕಿತು. ಅವನ್ನು ಹಾಗೆಯೇ ಹಿಡಿದುಕೊಂಡಳು. ಅವಳಿಗೆ ಒಂದು ಆಲೋಚನೆ ಬಂತು. ಈ ಎಳ್ಳನ್ನು ಅಂಗಳದಲ್ಲಿ ಬಿತ್ತಬೇಕು. ಅದು ಗಿಡವಾಗುತ್ತದೆ. ಅದರಲ್ಲಿ ಸ್ವಲ್ಪ ಎಳ್ಳು ಆಗುತ್ತದೆ. ಆ ಎಳ್ಳನ್ನು ಒಂದು ಗದ್ದೆಯಲ್ಲಿ ಬಿತ್ತಿದರೆ, ಅಷ್ಟು ಗಿಡದಲ್ಲಿ ಮತ್ತಷ್ಟು ಎಳ್ಳು ಆಗುತ್ತದೆ. ಅದನ್ನು ದೊಡ್ಡ ಗದ್ದೆಯಲ್ಲಿ ಬಿತ್ತಿದರೆ, ಆ ಗದ್ದೆಯಲ್ಲಿ ಒಂದು ಮುಡಿ ಎಳ್ಳು ಆಗುತ್ತದೆ. ಅದನ್ನು ಮಾರಿದರೆ ಹಣ ಬರುತ್ತದೆ. ಅದರ ಹಣವನ್ನೆಲ್ಲ ಒಟ್ಟು ಮಾಡಿದರೆ ಒಂದು ಚಿನ್ನದ ಓಲೆಯನ್ನು ಮಾಡಿಸಬಹುದು. ಹೀಗೆ ಯೋಚಿಸುತ್ತಾ ಮನೆಗೆ ಬಂದಳು.

ಮನೆಯ ಅಂಗಳದ ಮೂಲೆಯಲ್ಲಿ ಒಂದು ಎಳ್ಳನ್ನು ಬಿತ್ತಿದಳು. ಒಂದು ಗಿಡವಾಯಿತು. ಅದಕ್ಕೆ ನೀರು ಹೊಯ್ದು ಬೆಳೆಸಿದಳು. ಗಿಡದಲ್ಲಿ ಗಂಟುಗಂಟಿಗೆ ಹೂಬಿಟ್ಟಿತು. ಹೂ ಬಿಟ್ಟು ತೆನೆ ಆಯಿತು. ಬೆಳೆಯಿತು. ಕಿತ್ತು ಒಣಗಿಸಿದಾಗ ಒಂದು ಸೆರೆ ಎಳ್ಳಾಯಿತು. ಆ ಎಳ್ಳನ್ನು ಒಂದು ಕಳ ಮಾಡಿ ಬಿತ್ತಿದಳು. ಗೊಬ್ಬರ ಬೂದಿ ನೀರು ಹಾಕಿ ಬೆಳೆಸಿದಳು. ಅದರಲ್ಲಿ ಒಂದು ಸೇರು ಎಳ್ಳು ಆಯಿತು. ಬಳಿಕ ಒಂದು ಸಣ್ಣ ಗದ್ದೆ ಉತ್ತು ಬಿತ್ತಿದಳು. ಕಾಲಕಾಲಕ್ಕೆ ನೀರನ್ನು ಬಿಟ್ಟಳು. ಅದರಲ್ಲಿ ಒಂದು ಕಳಸಿಗೆ ಎಳ್ಳಾಯಿತು. ಒಂದು ಕಳಸಿಗೆ ಎಳ್ಳಿನಲ್ಲಿ ಎರಡು ಸೇರು ಬೀಜಕ್ಕೆ ಇಟ್ಟಳು. ಉಳಿದುದನ್ನು ಮಾರಿದಳು. ಮತ್ತೊಂದು ವರ್ಷ ಒಂದು ದೊಡ್ಡ ಗದ್ದೆಗೆ ಚೆನ್ನಾಗಿ ಗೊಬ್ಬರ ಬೂದಿ ಎಲ್ಲ ಹಾಕಿ ಹದ ಮಾಡಿ, ಬಿತ್ತಿಸಿದಳು. ಚೆನ್ನಾಗಿ ಬೆಳೆ ಬೆಳೆಸಿದಳು. ಅದರಲ್ಲಿ ಒಂದು ಮುಡಿ ಎಳ್ಳು ಬೆಳೆಯಿತು. ಹೀಗೆ ಐದಾರು ವರ್ಷ ಹೋದಾಗ, ಎಳ್ಳು ಮಾರಿದ ಹಣ ಐದಾರು ಸಾವಿರ ಆಯಿತು. ಆ ಹಣದಿಂದ ಚಿನ್ನದ ಓಲೆ ಮಾಡಿಸಿದಳು. ಎರಡೂ ಕಿವಿಗಳಿಗೆ ಚಿನ್ನದ ಓಲೆ ಹಾಕಿಕೊಂಡಳು. ಮುದುಕಿಗೆ ತುಂಬ ಕುಶಿಯಾಯಿತು. ಚಿನ್ನದ ಓಲೆ ಭಾಗ್ಯವನ್ನು ಪಡೆದಳು. ಹೀಗೆ ಒಂದು ಎಳ್ಳಿನಲ್ಲಿ ಒಂದು ಜೋಡಿ ಚಿನ್ನದ ಓಲೆ ಆಯಿತು.

ಹೇಳಿದವರು : **ನಾಗವೇಣಿ ಅಮ್ಮ, ಕನರಾಡಿ**

ತಾಯಿ - ಅತ್ತೆ

ಒಂದು ಊರಿನಲ್ಲಿ ಗಂಡ ಹೆಂಡತಿ ಇದ್ದರು. ಗಂಡನಿಗೆ ಒಬ್ಬಳು ತಾಯಿ, ಹೆಂಡತಿಗೊಬ್ಬಳು ತಾಯಿ. ಅವರು ಒಟ್ಟಿಗೇ ಇದ್ದರು. ಹೆಂಡತಿ ಯಾವಾಗಲೂ ಗಂಡನೊಡನೆ ಹೇಳುತ್ತಿದ್ದಳು. "ನಿಮ್ಮ ತಾಯಿ ಒಂದು ಸಂತೆ. ಆ ಸಂತೆ ತೆಗೆಯಿರಿ. ನಿಮ್ಮ ತಾಯಿಯನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಿ ಬಿಟ್ಟು ಬನ್ನಿ".

ಅದಕ್ಕೆ ಗಂಡ ಹೇಳಿದ "ಆಯ್ತು, ಮಹಾರಾಯ್ತಿ ಆಯ್ತು. ಒಂದು ಅರ್ಧ ಸೇರು ಅಕ್ಕಿಹಾಕಿ, ಒಂದು ಗಂಟು ಅಪ್ಪ ಕಜ್ಜಾಯ ಮಾಡಿಕೊಡು. ನಾನು ಬಿಟ್ಟು ಬರುತ್ತೇನೆ".

ಹೆಂಡತಿಗೆ ಖುಷಿಯಾಯಿತು. ಕೋಳಿಗೆ ಹಾಕುವ, ವಾಸನೆ ಬರುವ ಅಕ್ಕಿಯನ್ನು ಹಾಕಿದಳು. ಬೆಲ್ಲ ಸೇರಿಸಿದಳು. ಒಂದು ಗಂಟು ಅಪ್ಪ ಮಾಡಿಕೊಟ್ಟಳು.

ಗಂಡ ಗಂಟನ್ನು ಹಿಡಿದುಕೊಂಡ. "ಬನ್ನಿ ಅಮ್ಮ" ಎಂದು, ತಾಯಿಯನ್ನು ಕರೆದುಕೊಂಡುಹೋದ. ಹೋಗಿ, ಹೋಗಿ, ಒಂದು ಎತ್ತರದ ಗಿರಿಗುಡ್ಡೆಗೆ ಕರೆದುಕೊಂಡು ಹೋದ. ಅಲ್ಲಿ ಇಬ್ಬರೂ ಕುಳಿತರು. ಆ ಮುದುಕಿಗೆ ನಡೆದು ಸುಸ್ತಾಗಿತ್ತು. ಕುಳಿತುಕೊಂಡಲ್ಲೆ ಕಣ್ಣು ತೂಗಿತು. ನಿದ್ದೆ ಬಂತು. ಅಲ್ಲೇ ಮಲಗಿತು. ತಾಯಿಗೆ ಒಳ್ಳೆಯ ನಿದ್ದೆ ಬಂದದ್ದು ನೋಡಿದ ಮಗ, ಅಪ್ಪದ ಗಂಟು ಬಿಚ್ಚಿದ. ಬಿಚ್ಚಿ ಒಂದು ಅಪ್ಪ ಬಾಯಿಯಲ್ಲಿ ಇಟ್ಟ. ಒಂದು ಅಪ್ಪ ಕೈಯಲ್ಲಿ ಕೊಟ್ಟ. ಆ ಗಂಟನ್ನು ಅಲ್ಲೇ ಸಮೀಪ ಇಟ್ಟ. "ಒಳ್ಳೆದು ಮಾಡಿದ್ರೆ ಅಮ್ಮ ಒಳ್ಳೆಯದನ್ನು ಪಡೆಯುವಿರಿ, ಕೆಟ್ಟದ್ದು ಮಾಡಿದರೆ ಅಮ್ಮ, ಕೆಟ್ಟದ್ದನ್ನು ಪಡೆಯುವಿರಿ" ಎಂದು ಹೇಳಿದ. ನೇರ ಕೆಳಗೆ ಇಳಿದು ಬಂದ. ಬಂದು ಬಂದು ಮನೆಗೆ ಬಂದ.

ಬಂದ ಮೇಲೆ, ಅಲ್ಲಿ ನಡುರಾತ್ರಿಯಲ್ಲಿ ತಾಯಿಗೆ ಎಚ್ಚರವಾಯಿತು. ಎದ್ದು ನೋಡುವಾಗ ಮಗ ಇಲ್ಲ. ಎಲಾ, ಎಲ್ಲಿಗೆ ಹೋದ ಮಗ?

"ಮಗಾ, ಮಗಾ" ಎಂದು ಕರೆದಳು. ಮಾತು ಇಲ್ಲ. "ಅಯ್ಯೋ ನಾನೇನು ಮಾಡಲಿ. ಸಾಯಬೇಕೋ? ಏನು ಮಾಡಲಿ" ಎಂದು ಗೋಳಿಟ್ಟಳು.

ಬಾಯಿಯ ಅಪ್ಪವನ್ನು ಆಚೆ ಉಗಿದು. ಕೈಯಲ್ಲಿದ್ದ ಅಪ್ಪವನ್ನು ಈಚೆ ಎಸೆದಳು. ಮತ್ತೆ ನೇರ ಕೆಳಗೆ ಇಳಿದುಕೊಂಡು ಬಂದಳು. ಬಂದಾಗ ಒಂದು ಕೆರೆ ಸಿಕ್ಕಿತು. ಆ ಕೆರೆಯ ಸುತ್ತ ತುಂಬಬಲ್ಲೆ. ಕಾಲು ಹಾಕಲು ಸಾಧ್ಯವಿಲ್ಲ. ಆ ಮುದುಕಿ ಅಲ್ಲೇ ಕುಳಿತುಕೊಂಡು ಬಲ್ಲೆಯನ್ನೆಲ್ಲ ಕೈಯಲ್ಲಿ ಕಿತ್ತು ತೆಗೆದಳು. ನಿರ್ಮಲ ಮಾಡಿದಳು. ಕೆರೆಯ ಸುತ್ತ ಚೊಕ್ಕ ಮಾಡಿದಾಗ ತುಂಬ ರಾತ್ರಿಯಾಯಿತು. ರಾತ್ರಿ ಹನ್ನೆರಡು ಗಂಟೆ ಆಗುವಾಗ ಏಳು ಜನ ಸಿರಿಗಳು (ದೇವತೆಗಳು) ಮೀಯಲು ಬಂದರು. ಕೆರೆಯ ಬಳಿ ಬಂದಾಗ ಬಹಳ ಸುಂದರವಾಗಿದೆ. ಆಹಾ! ಇದು ಯಾರಪ್ಪ ಇಷ್ಟು ಚೊಕ್ಕ ಮಾಡಿದ್ದು? ಯಾರು ಇದ್ದೀರಿ ಇಲ್ಲಿ? ಇದ್ದರೆ ಬನ್ನಿ. ನಾವು ಏನೂ ಮಾಡುವುದಿಲ್ಲ. ತುಂಬ ಚೆಂದ ಆಗಿದೆ. ಸಂತೋಷವಾಯಿತು" ಎಂದು ಹೇಳುತ್ತಿದ್ದರು. ಹೀಗೆ ನೋಡುವಾಗ ಒಂದು ಮುದುಕಿ ಇದ್ದಾಳೆ. "ವಾಹ್! ನೀವು ಇಷ್ಟು ಚೆಂದ ಮಾಡಿದ್ದ? ಹದಿನಾರು ವರ್ಷದ ಹೆಣ್ಣು ಮಗಳಾಗಿ ಹೋಗಿ" ಎಂದು ಏಳುಜನ ಸಿರಿಗಳು ಹೇಳಿದ್ದೇ ತಡ, ಮುದುಕಿ ಹೋಗಿ, ಹದಿನಾರು ವರ್ಷದ ಹೆಣ್ಣು ಮಗಳಾದರು.

ಮರುದಿನ ಗಂಡ ಅಲ್ಲಿಗೆ ಬಂದ. ನನ್ನ ತಾಯಿಯನ್ನು ನಿನ್ನೆ ಇಲ್ಲಿ ಬಿಟ್ಟಿದ್ದೇನೆ. ಹುಲಿ ತಿಂದಿದೆಯಾ? ತೋಳ ತಿಂದಿದೆಯಾ? ಏನಾಯಿತು ನೋಡುತ್ತೇನೆ ಎಂದು ಮಗ ಅಲ್ಲಿಗೇ ಬಂದ ಬಂದು ಆಚೆ ಈಚೆ ನೋಡಿದ. ಮೇಲೆ ಹೋದ, ಕೆಳಗೆ ಬಂದ. ಅಲ್ಲಿಗೇ ಬಂದ. ತಾಯಿ ಇಲ್ಲ. ನೋಡುವಾಗ ಯುವತಿಯೊಬ್ಬಳಿದ್ದಾಳೆ. "ಅಮ್ಮಾ"ಎಂದು ಕರೆದ. ಕರೆದಾಗ ಆ ಹೆಣ್ಣುಮಗಳು ಓ ಎಂದಳು. ಮಗನಿಗೆ ತುಂಬ ಸಂತೋಷವಾಯಿತು. ಯುವತಿಯನ್ನು ಕರೆದುಕೊಂಡು ಹೋದ. ಕರೆದುಕೊಂಡು ಹೋಗುವಾಗ ಹೆಂಡತಿ ನೋಡುತ್ತಿದ್ದಾಳೆ. ಅವಳು ಹೇಳುತ್ತಾಳೆ. "ಅಮ್ಮನನ್ನು ನೋಡಲು ಹೋದವರು ಹೆಣ್ಣು ತರುತ್ತಿದ್ದಾರೆ. ಅಮ್ಮನನ್ನು ನೋಡಲು ಹೋದವರು ಹೆಣ್ಣು ತಂದರು".

ಮನೆಗೆ ತಾಯಿಯನ್ನು ಕರೆದುಕೊಂಡು ಬಂದ. ಮನೆಗೆ ಹೋಗುವಾಗಲೂ ಹಾಗೆಯೇ ಹೇಳಿದಳು. "ಅಮ್ಮನನ್ನು ನೋಡಲು ಹೋದವರು ಹೆಣ್ಣು ತಂದರು"

"ನನ್ನ ಅಮ್ಮ ಅಲ್ಪ, ನೋಡು" ಎಂದು ಜೋರು ಮಾಡಿದ ಹೌದು ನೋಡುವಾಗ ಗಂಡನ ತಾಯಿ. ಅವಳ ಅತ್ತೆ. ಅಯ್ಯೋ ತುಂಬ ಹೊಟ್ಟೆ ಕಿಚ್ಚಾಯಿತು.

"ಹಾಗಾದರೆ ನನ್ನ ತಾಯಿಯನ್ನೂ ಬಿಟ್ಟು ಬನ್ನಿ. ನನ್ನ ತಾಯಿಯನ್ನು ಬಿಟ್ಟು ಬನ್ನಿ" ಎಂದು ಹೇಳಿದಳು ಹೆಂಡತಿ.

"ಆಗಲಿ, ಒಂದಷ್ಟು ಅಪ್ಪ ಮಾಡಿಕೊಡು" ಎಂದ ಗಂಡ. ಇವಳು ಒಂದು ಸೇರು ಅಕ್ಕಿ ಹಾಕಿದಳು. ಒಂದು ತೆಂಗಿನಕಾಯಿ ಹಾಕಿದಳು. ಸರೀ ಬೆಲ್ಲ ಬೆರೆಸಿದಳು. ತುಂಬ ಅಪ್ಪ ಮಾಡಿದಳು. ಒಂದು ದೊಡ್ಡ ಗಂಟು ಮಾಡಿಕೊಟ್ಟಳು.

ಗಂಡ ಗಂಟು ಹಿಡಿದುಕೊಂಡ "ಬನ್ನಿ ಅತ್ತೆ, ಹೋಗೋಣ" ಎಂದು ಕರೆದುಕೊಂಡು ಹೋದ. ಹೋಗಿ, ಹೋಗಿ ಅಲ್ಲಿಗೇ ಹೋದರು. ಅಲ್ಲೇ ಕುಳಿತರು. ಕುಳಿತು ಸ್ವಲ್ಪ ಮಾತನಾಡಿದರು. ಅಷ್ಟಾಗುವಾಗ ಮುದುಕಿಗೆ ಕಣ್ಣು ತೂಗಿತು. ನಿದ್ದೆ ಬಂತು. ಅಲ್ಲೇ ಮಲಗಿತು. ಮುದುಕಿಗೆ ಒಳ್ಳೆ ನಿದ್ದೆ ಬಂತು. ನಿದ್ದೆ ಬಂದದ್ದನ್ನು ನೋಡಿದ, ಅಪ್ಪದ ಗಂಟನ್ನು ಬಿಚ್ಚಿದ ಒಂದು ಅಪ್ಪ ಬಾಯಲ್ಲಿಟ್ಟ. ಒಂದು ಅಪ್ಪ ಕೈಯಲ್ಲಿ ಕೊಟ್ಟ. "ಒಳ್ಳೆದು ಮಾಡಿದರೆ ಅತ್ತೆ ಒಳ್ಳೆಯದನ್ನು ಅನುಭವಿಸುವಿರಿ. ಕೆಟ್ಟದ್ದು ಮಾಡಿದರೆ, ಕೆಟ್ಟದ್ದನ್ನು ಅನುಭವಿಸುವಿರಿ" ಎಂದ, ನೇರ ಇಳಿದು ಬಂದ.

ಈ ಮುದುಕಿ ಸ್ವಲ್ಪ ಹೊತ್ತಾದ ಬಳಿಕ ಎಚ್ಚರಗೊಂಡು ಎದ್ದಿತು. ಅಳಿಯ ಇಲ್ಲ! ಬಾಯಿಯಲ್ಲಿದ್ದುದನ್ನು ತಿಂದಿತು. ಕೈಯಲ್ಲಿದ್ದುದನ್ನು ತಿಂದಿತು. ಗಂಟಿನಲ್ಲಿದ್ದುದನ್ನೆಲ್ಲ ಚೆಂದಮಾಡಿ ತಿಂದಿತು. ಎಲ್ಲ ಅಪ್ಪ ತಿಂದಿತು. ತಿಂದಾಗುವಾಗ ಬಾಯಾರಿತು. ಬಾಯಾರಿಕೆಗೆ ನೀರು ಎಲ್ಲಿದೆ? ಅದೇ ಕೆರೆಯ ಬಳಿ ಬಂದಿತು. ಬಂದು ಸರೀ ನೀರು ಕುಡಿಯಿತು. ಹೊಟ್ಟೆ ನೋವು ಸುರುವಾಯಿತು. ಅಲ್ಲೇ ಹೇಲು ಮಾಡಿತು. ನೀರು ಕುಡಿಯಿತು, ಹೇಲು ಮಾಡಿತು. ಎಲ್ಲ ಕಡೆ ಹೊಲಸು ಮಾಡಿತು. ಅಲ್ಲೇ ಸರ್ತ ಕುಳಿತುಕೊಂಡುಬಿಟ್ಟಿತು.

ಹನ್ನೆರಡು ಗಂಟೆ ರಾತ್ರಿಗೆ ಏಳುಜನ ಸಿರಿಗಳು ಮೀಯಲು ಬಂದರು. ಮೀಯಲು ನೋಡುತ್ತಾರೆ. ಎಲ್ಲಿ ಹೋದರೂ ವಾಸನೆ! ಕಾಲು ಹಾಕಲು ಜಾಗ ಇಲ್ಲ. ಎಲ, ನನ್ನ ಶನಿಯೇ! ನಿನ್ನೆ ಒಂದು ಮುದುಕಿ ಇತ್ತು. ಬಹಳ ಶುಚಿತ್ವದ ಮುದುಕಿ. ಇವತ್ತು ಇದು ಯಾರಪ್ಪ ಇಷ್ಟು ಹೊಲಸು ಮಾಡಿದ್ದು. ಏಳು ಜನ ಸಿರಿಗಳು ಈ ಮುದುಕಿಯನ್ನು ನೋಡಿದರು. "ನೀನೆಯೋ ಮುದುಕಿ, ಇಷ್ಟು ಹೊಲಸು ಮಾಡಿದ್ದು. ನಿನ್ನ ಹೊಲಸು ನೀನೇ ತಿನ್ನಬೇಕು. ನೀನೊಂದು ಹಂದಿಯಾಗಿ ಹೋಗು" ಎಂದು ಶಾಪಕೊಟ್ಟರು. ಮುದುಕಿ ಹೋಗಿ ಹಂದಿ ಆಯಿತು. ಗುಂರ್ಕು... ಗುಂರ್ಕು ಎಂದು ಹೇಳುತ್ತಾ ಬಂತು.

ಮರುದಿನ ಗಂಡ ಅತ್ತೆಯನ್ನು ನೋಡಲು ಬಂದ. ಬಂದು ನೋಡುವಾಗ ಮುದುಕಿಯೂ

ಇಲ್ಲ. ಯುವತಿಯೂ ಇಲ್ಲ. ಯಾರು ಇಲ್ಲ. ಹೀಗೆ ನೋಡುವಾಗ ಒಂದು ಹಂದಿ ಕಾಣುತ್ತಿತ್ತು. ಬಂದು ಕೆರೆಯ ಬಳಿ ನೋಡಿದ. ಇಲ್ಲ, "ಅತ್ತೇ"ಯೆಂದು ಕರೆದ. 'ಗುಂರ್ಕು' ಎಂದು ಹೇಳಿತು ಹಂದಿ. ಹೋ! ಅತ್ತೆ ಹೋಗಿ ಹಂದಿಯಾಗಿದ್ದಾರೆ. ಬಲ್ಲೆಯ ಒಂದು ಬಿಳಲು ಎಳೆದ. ಹಂದಿಯ ಕುತ್ತಿಗೆಗೆ ಕಟ್ಟಿದ. ಕಟ್ಟಿ ಎಳೆದುಕೊಂಡು ಬಂದ.

ಹಂದಿಯನ್ನು ಎಳೆದುಕೊಂಡು ಬರುವುದನ್ನು ಹೆಂಡತಿ ನೋಡಿದಳು. ಮತ್ತೆ ಎಂದಳು "ನೋಡಿ, ತಾಯಿಯನ್ನು ನೋಡಲು ಹೋದವರು, ಹಂದಿ ತಂದರು. "ಆಗ ಗಂಡ ಜೋರು ಮಾಡಿದ - "ಹಾಗೆ ಹೇಳ್ತೀಯಾ? ನಿನ್ನ ತಾಯಿಯಲ್ವ. ಒಮ್ಮೆ ಕರೆದುನೋಡು" ಎಂದ.

ಹೆಂಡತಿ "ಅಮ್ಮಾ" ಎಂದು ಕರೆದಳು.

ಹಂದಿ "ಗುಂರ್ಕು" ಎಂದಿತು.

"ಅಮ್ಮಾ" - "ಗುಂರ್ಕು"

"ಅಮ್ಮಾ" - "ಗುಂರ್ಕು"

ಹೇಳಿದವರು : **ಪರಮೇಶ್ವರಿ ಶೆಡ್ತಿ, ಮುಂಡಾಡಿ, ಬಂಟ್ವಾಳ**

❒❒❒❒❒❒

ಜೋಕ್ಲೆಗಾದ್ ತುಳು ಕತೆಕ್ಕುಲು

1. ಕೋಟಿ- ಚೆನ್ನಯ : ಡಾ. ವಾಮನ ನಂದಾವರ
2. ಅಕ್ಕೆರಸು ಸಿರಿ : ಎ. ವಿ. ನಾವಡ
3. ಕೋಡ್ದಬ್ಬು : ಡಾ. ಸುಶೀಲಾ ಉಪಾಧ್ಯಾಯ
4. ಪರತಿ ಮಂಗನೆ : ಕೆ. ಲೀಲಾವತಿ
5. ಪುಳ್ಕೂರ ಬಾಚೆ : ವೆಂಕಟರಾಜ ಪುಣಿಂಚತ್ತಾಯ
6. ಅಬ್ಬಗೆ ದಾರಗೆ : ಕೆ.ಜೆ. ಶೆಟ್ಟಿ ಕಂಡಂದಲೆ
7. ಮೂಂಕು ಸಂಬಳೊ : ಡಾ. ಕೆ. ಚಿನ್ನಪ್ಪ ಗೌಡ
8. ಮಗೆ ಬರವು ಕಲ್ತೆ : ಕನರಾಡಿ ವಾದಿರಾಜ ಭಟ್
9. ಮಾಯಾಂದಾಳ್ : ಯಶವಂತಿ ಸುವರ್ಣ
10. ಕಲ್ಲುರ್ಟಿ ಕಲ್ಕುಡೆ : ಅಮೃತ ಸೋಮೇಶ್ವರ
11. ಬನ್ನಾಲ್ : ಕ್ಯಾಥರಿನ್ ರಾಡ್ರಿಗಸ್
12. ಮಾಮಿ ಮರ್ಮಲ್ : ಡಾ. ಗಣನಾಥ ಶೆಟ್ಟಿ ಎಕ್ಕಾರು
13. ಜೋಗಿ ಪುರುಸೆರ್ : ಕುದ್ಕಾಡಿ ವಿಶ್ವನಾಥ ರೈ
14. ಅಗೋಳಿ ಮಂಜನೆ : ಗಣೇಶ ಅಮೀನ್ ಸಂಕಮಾರ್
15. ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ : ಕೆ. ಆರ್. ರೈ
16. ನಾಗಸಿರಿ : ಅನಂತರಾಮ ಬಂಗಾಡಿ
17. ಮಾಯೊದ ಪೊಣ್ಣು : ಡಿ. ಯದುಪತಿ ಗೌಡ
18. ಮುಡಿಪ್ಪೆರಾವಂದಿ ಮಲ್ಲಿಗೆ : ಎನ್. ಕೊಯಿರಾ ಬಾಳೆಪುಣಿ
19. ಅಪ್ಪೊದಡ್ಯೆ : ಮುದ್ದು ಮೂಡುಬೆಳ್ಳೆ
20. ಭೂತಾಳ ಪಾಂಡ್ಯೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್